09 October 2026 Friday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ವರ್ತಮಾನ

ಸಂಪಾದಕ: ಕೆ.ಎನ್.ರವಿ

info.varthaman@gmail.com

ಭವಿಷ್ಯದ ಮುನ್ನುಡಿ

ಭಾವನಾಂತರಂಗ

ಬದಲಾದ ಭಾವನೆಗಳಿಗೆ ಮನಸ್ಸು ಬೇಗ ಒಪ್ಪಿಕೊಂಡಂತೆ, ನಮ್ಮ ಅಂತರಂಗ ಒಪ್ಪಿಕೊಳ್ಳುವುದಿಲ್ಲ!

ಸ್ನೇಹಾ ಆನಂದ್

"ಪ್ರಜಾಪ್ರಭುತ್ವದ ಹಬ್ಬ" ಸಂದೇಶ: ಫಲಪುಷ್ಪಗಳಲ್ಲಿ ಅರಳಲಿದೆ ವಿಧಾನಸೌಧ — ಪುಟ ಸಂ. 2

ಪುಟ ಸಂ. 3 — ಬುಡಕಟ್ಟು ಮಕ್ಕಳಿಗೆ ಸಫಾರಿ, ರಾಮಪುರದಲ್ಲಿ ಆನೆಗಳಿಗೆ ಪೂಜೆ

ಎಚ್‌ಡಿಕೆ ವಿರುದ್ಧ ಮಾಜಿ ಶಾಸಕ ಕೆ.ರಾಜು ಕಿಡಿ — ಪುಟ ಸಂ. 4

9742504916 ಮೈಸೂರು ಮಂಡ್ಯ ಬೆಂಗಳೂರು ಹಾಸನ ಚಾಮರಾಜನಗರ ರಾಮನಗರ ಬೆಂಗಳೂರು ಗ್ರಾಮಾಂತರ ಕೊಡಗು

ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN Volume: 69 Issue: 291 Pages: 06 KA/SK/MYS/1098/2023-2025 R.N.I. No.3577/1957 www.varthaman.in Price-3

ಕಾರ್ಗಿಲ್ ಯುದ್ಧದಲ್ಲಿ ಸೇನೆ ಸೇರಿದ್ದ ನಾನಾ ಪಾಟೇಕರ್!

ಬೆಂಗಳೂರು: ಖ್ಯಾತ ನಟ ನಾನಾ ಪಾಟೇಕರ್ ಅಭಿನಯಕ್ಕೆ ಮಾತ್ರ ಸೀಮಿತವಾಗಿರಲಿಲ್ಲ. ಸಮಾಜ ಸೇವೆ, ದೇಶಸೇವೆಯಲ್ಲೂ ಸಹ ತೊಡಗಿಸಿಕೊಂಡಿದ್ದರು. ಕಾರ್ಗಿಲ್ ಯುದ್ಧದ ಸಮಯದಲ್ಲಿ ಭಾರತೀಯ ಸೇನೆಗೆ ಸೇರಿ ದೇಶಸೇವೆ ಮಾಡಿದ್ದರು.

1991ರಲ್ಲಿ ತೆರೆಕಂಡ ಪ್ರಹಾರ್ ದಿ ಫೈನಲ್ ಅಟ್ಯಾಕ್ ಸಿನಿಮಾದ ಕಮಾಂಡೋ ಪಾತ್ರಕ್ಕಾಗಿ ನಾನಾ ಪಾಟೇಕರ್ ಅವರು, ಮರಾಠಾ ಲೈಟ್ ಇನ್ಫೆಂಟ್ರಿ ಜೊತೆ ಮೂರು ವರ್ಷಗಳ ಕಾಲ ಕಠಿಣ ಸೇನಾ ತರಬೇತಿ ಪಡೆದಿದ್ದರು. ಈ ತರಬೇತಿ ನಂತರ ಅವರು 1980ರ ದಶಕದ ಉತ್ತರಾರ್ಧದಲ್ಲಿ ಟೆರಿಟೋರಿಯಲ್ ಆರ್ಮಿಗೆ ಅಧಿಕೃತವಾಗಿ ಸೇರ್ಪಡೆಗೊಂಡಿದ್ದರು.

ಈ ತರಬೇತಿಯಿಂದಲೇ ಅವರು 1999ರಲ್ಲಿ ಭಾರತ ಮತ್ತು ಪಾಕಿಸ್ತಾನದ ನಡುವೆ ಕಾರ್ಗಿಲ್ ಯುದ್ಧ ಸಂಭವಿಸಿದಾಗ, ಗಡಿಯಲ್ಲಿ ಸೇವೆ ಸಲ್ಲಿಸುವುದಾಗಿ ಹಿರಿಯ ಅಧಿಕಾರಿಗಳನ್ನು ಕೋರಿದ್ದರು. ರಕ್ಷಣಾ ಸಚಿವರು ಮಾತ್ರ ಇದಕ್ಕೆ ಅನುಮತಿ ನೀಡಬಹುದು ಎಂದು ಸೇನೆ ಅಧಿಕಾರಿಗಳು ತಿಳಿಸಿದ್ದರು.



ನಾನಾ ಆಗಿನ ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಅವರನ್ನು ಸಂಪರ್ಕಿಸಿ ಸೇವೆ ಸಲ್ಲಿಸಲು ಅನುಮತಿ ಪಡೆದಿದ್ದರು. ಅನುಮತಿ ಸಿಕ್ಕ ಬಳಿಕ ನಟನೆಯನ್ನು ತಾತ್ಕಾಲಿಕವಾಗಿ ಬಿಟ್ಟು ಸೇನೆಯ ಕ್ವಿಕ್ ರಿಯಾಕ್ಷನ್ ಟೀಮ್ ಸೇರಿಕೊಂಡಿದ್ದರು. ಶ್ರೀನಗರ, ಡ್ರಾಸ್, ಮತ್ತು ಲೇತ್‌ನಂತಹ ಗಡಿ ಪ್ರದೇಶಗಳಲ್ಲಿ ಸೈನಿಕರೊಂದಿಗೆ ಸುಮಾರು 60 ದಿನ ಭಾಗವಹಿಸಿದ್ದರು. ಈ ಕಠಿಣ ಸೇವೆಯ ಸಮಯದಲ್ಲಿ 76 ಕೆಜಿ ತೂಕವಿದ್ದ ಅವರು, ಸುಮಾರು 20 ಕೆಜಿ ತೂಕವನ್ನು ಕಳೆದುಕೊಂಡಿದ್ದರು.

ನಾನಾ ಪಾಟೇಕರ್ ವಿಧಿವಶ

ಗೋವಾ: ಖ್ಯಾತ ಬಹುಭಾಷಾ ನಟ ನಾನಾ ಪಾಟೇಕರ್ (75) ಅವರು ಗೋವಾದ ತಮ್ಮ ನಿವಾಸದಲ್ಲಿ ಗುರುವಾರ ಬೆಳ್ಳಗ್ಗೆ ತೀವ್ರ ಹೃದಯಾಘಾತದಿಂದ ನಿಧನರಾದರು.

ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಅವರನ್ನು ಸಮೀಪದ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು. ಆದರೆ, ಅವರು ಅಷ್ಟರಲ್ಲಾಗಲೇ ಮೃತಪಟ್ಟಿದ್ದಾರೆ ಎಂದು ವೈದ್ಯರು ತಿಳಿಸಿದರು. ಹೃದಯಾಘಾತದಿಂದ ಬೆಳಗ್ಗೆ 5.20ರ ಸುಮಾರಿಗೆ ಮೃತಪಟ್ಟಿದ್ದಾರೆ. ಅವರನ್ನು ಕರೆತಂದ ನಂತರ 45 ನಿಮಿಷಗಳ ಕಾಲ ನಿರಂತರವಾಗಿ ಸಿಪಿಆರ್ ನಡೆಸಲಾಯಿತಾದರೂ ಪ್ರಯೋಜನವಾಗಲಿಲ್ಲ.

ದೇಶಕಂಡ ಶ್ರೇಷ್ಠ ನಟರಲ್ಲಿ ಒಬ್ಬರೆನಿಸಿರುವ ನಾನಾ ಪಾಟೇಕರ್, ಪರಿಂದಾ, ಕ್ರಾಂತಿವೀರ್, ಅಬ್ ತಕ್ ಛಪ್ಪನ್ ಮತ್ತು ವೆಲ್‌ಕಮ್ ಸೇರಿದಂತೆ ಹಲವು ಸಿನಿಮಾಗಳ ಮೂಲಕ ಮನೆಮಾತಾಗಿದ್ದಾರೆ. ನಾನಾ ಸಾವಿಗೆ ಪ್ರಧಾನಿ ಮೋದಿ ಸೇರಿದಂತೆ ಸಾವಿರಾರು ಗಣ್ಯರು ಸಂತಾಪ ಸೂಚಿಸಿದ್ದಾರೆ.

ಗಜ 'ಮಹೇಂದ್ರ'ನ ಮುಷ್ಕರ

ದಸರಾ ಇತಿಹಾಸದಲ್ಲಿ ಮೊದಲ ಬಾರಿಗೆ ಗಜಪಡೆ ತಾಲೀಮು ಮೊಟಕು

ಮೈಸೂರು: ದಸರಾ ತಾಲೀಮಿನಲ್ಲಿ ಮರದ ಅಂಬಾರಿ ಹೊತ್ತಿದ್ದ ಮಹೇಂದ್ರ ಆನೆ ಆಯಾಸಗೊಂಡು ಅರ್ಧಕ್ಕೆ ನಿಂತಿದೆ. ತಾಲೀಮು ಮೊಟಕುಗೊಳಿಸಿ ಹಿಂದಕ್ಕೆ ಸರಿದ ಘಟನೆ ಗುರುವಾರ ಸಂಜೆ ನಡೆದಿದೆ.

ಗಜಪಡೆಯ ಐದು ಆನೆಗಳಾದ ಧನಂಜಯ, ಏಕಲವ್ಯ, ಪ್ರಶಾಂತ, ಸುಗ್ರೀವ, ಮಹೇಂದ್ರ ಆನೆಗಳ ಪೈಕಿ ಒಂದೊಂದು ಆನೆಗಳಿಗೆ ಮರದ ಅಂಬಾರಿ ಹಾಗೂ 1000 ಕೆಜಿ ಭಾರ ಹೊರುವ ತಾಲೀಮು ನಡೆಸಲಾಗುತ್ತಿದೆ. ಆದರೆ, ಗುರುವಾರ ಸಂಜೆ ಎಂದಿನಂತೆ ಅರಮನೆ ಕೋಟೆ ಆಂಜನೇಯ ಸ್ವಾಮಿ ದೇವಾಲಯದ ಭಾಗದಿಂದ ಮಹೇಂದ್ರ ಆನೆಗೆ ಮರದ ಅಂಬಾರಿಯ ಭಾರ ಹೊರಿಸುವ ತಾಲೀಮು ಪ್ರಾರಂಭಗೊಂಡಿತ್ತು. ಸಯ್ಯಾಜಿರಾವ್ ರಸ್ತೆ ಮೂಲಕ ಆಯುರ್ವೇದ ವೃತ್ತದವರೆಗೂ ಹೆಜ್ಜೆ ಹಾಕಿದ ಮಹೇಂದ್ರ ಮುಂದೆ ಹೆಜ್ಜೆ ಹಾಕಲು ನಿರಾಕರಿಸಿದ್ದಾನೆ.

ಮಾವುತ ಹಾಗೂ ಇತರರು ಕೂಡಲೇ ಎಚ್ಚೆತ್ತುಕೊಂಡು ಭಾರ ಇಳಿಸುವ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಭಾರವಾದ ಮರಳುಮೂಟೆ ಇಳಿಸುವುದು ಕಷ್ಟವಾಗಿತ್ತು. ಮರದ ಕೊಂಬೆಗೆ ಮರದ ಅಂಬಾರಿಯನ್ನು ಕಟ್ಟಿ ಆನೆಯನ್ನು ಮುಂದಕ್ಕೆ ಹೆಜ್ಜೆ ಹಾಕಿಸಿ ಕೊನೆಗೆ ವಾಹನಕ್ಕೆ ಮರದ ಅಂಬಾರಿಯನ್ನು ಇಳಿಸಿದ್ದಾರೆ. ಮಹೇಂದ್ರ ನನ್ನು ಅರಮನೆ ಆವರಣಕ್ಕೆ ವಾಪಸ್ ಕರೆತಂದಿದ್ದಾರೆ.



ಇತಿಹಾಸದಲ್ಲಿ ಜಂಬೂ ಸವಾರಿ ತಾಲೀಮು ವೇಳೆ ಇಂತಹ ತಡೆ ಆಗಿರಲಿಲ್ಲ. ಕಳೆದ ಸೆ.26ರಂದು ಸಹ ಮಹೇಂದ್ರ ಆನೆ ಹೀಗೆ ಅರ್ಧಕ್ಕೆ ನಿಂತಿದ್ದ. ಅಂದು ಮಳೆಗೆ ಭಾರ ಹೆಚ್ಚಳವಾಗಿತ್ತೆಂದು ಹೇಳಲಾಗಿತ್ತು. ಭವಿಷ್ಯದಲ್ಲಿ ಯಾವುದೇ ವಿಘ್ನ ಆಗುವುದಕ್ಕೂ ಮುನ್ನವೇ ಆನೆಯ ಆಯಾಸದ ಸೂಚನೆ ಸಿಕ್ಕಿರುವುದರಿಂದ ಅರಣ್ಯ ಇಲಾಖೆ ಎಚ್ಚರಿಕೆಯ ಹೆಜ್ಜೆಯನ್ನಿಡಲು ಮುಂದಾಗಿದೆ.

ಅಂಬಾರಿ ಹೊರಲ್ಲ

ಇಂದಿನ ತಾಲೀಮಿನ ವೇಳೆ ಮರದ ಅಂಬಾರಿ ಹೊತ್ತಿದ್ದ ಮಹೇಂದ್ರ ಆನೆ ಅನಾನುಕೂಲತೆ ಅನುಭವವಾದಂತೆ ಕಂಡುಬಂದಿದ್ದರಿಂದ ಅದು ಮುಂದೆ ಸಾಗಲು ನಿರಾಕರಿಸಿತು. ಅಂಬಾರಿಯನ್ನು ಸುರಕ್ಷಿತವಾಗಿ ಕೆಳಗಿಳಿಸಿ ಆನೆಯನ್ನು ಶಿಬಿರಕ್ಕೆ ಹಿಂತಿರುಗಿಸಲಾಯಿತು. ಭಾರ ಹೊರುವಲ್ಲಿ ಮಹೇಂದ್ರ ಅಸ್ವಾಭಾವಿಕ ನಡೆ ತೋರಿ ಹಿಂದೆ ಸರಿದಿದ್ದಾನೆ. ಹೀಗಾಗಿ ಆತನನ್ನು ಈ ಬಾರಿ ಅಂಬಾರಿ ಹೊರುವ ಪುಟ 2ಕ್ಕೆ

ಅಡುಗೆ ಎಣ್ಣೆ ಮರುಬಳಕೆಗೆ ಬ್ರೇಕ್: ಆರೋಗ್ಯ ಸಚಿವ ಯು.ಟಿ.ಖಾದರ್

ತುಮಕೂರು: ಅಡುಗೆ ಎಣ್ಣೆ ಮರುಬಳಕೆ ದಂಧೆಗೆ ಬ್ರೇಕ್ ಹಾಕಲು ಚಿಂತನೆ ನಡೆಸಲಾಗುತ್ತದೆ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಹೋಟೆಲ್‌ಗಳಲ್ಲಿ ಅಡುಗೆ ಎಣ್ಣೆ ಮರುಬಳಕೆ ದಂಧೆ ನಡೆಯುತ್ತಿದೆ. ಇದನ್ನು ಬ್ಯಾನ್ ಮಾಡುವ ಯೋಚನೆ ಇದೆ. ಎಣ್ಣೆಯನ್ನು ಎಲ್ಲಿ ಖರೀದಿಸುತ್ತಾರೋ ಅಲ್ಲಿಯೇ ನೋಂದಣಿ ಮಾಡಬೇಕಾಗುತ್ತದೆ. ಇದಕ್ಕಾಗಿ ಆಪ್‌ನಲ್ಲಿ ನಮೂದು ಮಾಡುವಂತೆ ಚಿಂತನೆ ನಡೆಸಲಾಗಿದೆ. ಬಳಕೆ ಮಾಡಿದ ನಂತರ ಉಳಿದ ಎಣ್ಣೆ ಪ್ರಮಾಣ ಎಷ್ಟು ಎಂದು ಇದರಿಂದ ಗೊತ್ತಾಗಲಿದೆ ಎಂದು ಹೇಳಿದರು.

ಸಿಎಂ ಸ್ಟಿಂಗ್ ಆಪರೇಷನ್ ಕುರಿತು ಪ್ರತಿಕ್ರಿಯಿಸಿದ ಸಚಿವರು, ಈ ವಿಚಾರ ನನಗೆ ಗೊತ್ತಿಲ್ಲ. ನಾನು ಚೆನ್ನಾಗಿ ಕೆಲಸ ಮಾಡುವುದರಲ್ಲಿ ನಿರತನಾಗಿದ್ದೇನೆ. ಸಿಎಂ ಎಚ್ಚರಿಕೆ ಕೊಟ್ಟಿರುವ ಸಚಿವರು ಯಾರು ಎಂದು ನನಗೆ ಗೊತ್ತಿಲ್ಲ. ನಾನು ಮೊನ್ನೆ ಕ್ಯಾಬಿನೆಟ್ ಸಭೆಯಿಂದ ಬೇಗ ಹೋಗಿದ್ದೆ, ಅಲ್ಲಿ ನಡೆದ ಚರ್ಚೆ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದು ಹೇಳಿದರು.

ನಕಲಿ ವೈದ್ಯರ ವಿರುದ್ಧ ಕ್ರಮ

ನಕಲಿ ವೈದ್ಯರನ್ನು ಯಾವುದೇ ಕಾರಣಕ್ಕೂ ಸಹಿಸುವುದಿಲ್ಲ. ಅವರ ವಿರುದ್ಧ ಖಂಡಿತ ಕ್ರಮ ಕೈಗೊಳ್ಳುತ್ತೇನೆ. ಅಧಿಕಾರಿಗಳು ಅಥವಾ ರಾಜಕಾರಣಿಗಳು ನಕಲಿ ವೈದ್ಯರ ಹಿಂದೆ ಇದ್ದರೂ ಕ್ರಮ ನಿಶ್ಚಿತ. ಇನ್ನು 15 ದಿನದಲ್ಲಿ ಎಲ್ಲವನ್ನೂ ಕ್ಲೀನ್ ಮಾಡುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಆರೋಗ್ಯ ಸಚಿವ ಯು.ಟಿ.ಖಾದರ್ ಗುಡುಗಿದರು.

ನನ್ನ ವಿರುದ್ಧವೇ ಸ್ಟಿಂಗ್ ಆಪರೇಷನ್

ಸ್ಫೋಟಕ ಮಾಹಿತಿ ಬಹಿರಂಗಪಡಿಸಿದ ಸಿಎಂ ಡಿ.ಕೆ.ಶಿವಕುಮಾರ್

ನವದೆಹಲಿ: ನನ್ನ ವಿರುದ್ಧವೂ ಸ್ಟಿಂಗ್ ಆಪರೇಷನ್ ನಡೆಸಲು ಸಂಚು ರೂಪಿಸಲಾಗಿತ್ತು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಸ್ಫೋಟಕ ಹೇಳಿಕೆ ನೀಡಿದ್ದಾರೆ.

ರಾಜ್ಯ ರಾಜಕೀಯದಲ್ಲಿ ಸಚಿವರನ್ನು ಗುರಿಯಾಗಿಸಿಕೊಂಡು ಸ್ಟಿಂಗ್ ಆಪರೇಷನ್ ನಡೆಸಲಾಗುತ್ತಿದೆ ಎಂಬ ಚರ್ಚೆ ಬೆನ್ನಲ್ಲೇ ಮಾಧ್ಯಮಗಳ ಜೊತೆ ಮಾತನಾಡಿದ ಅವರು,



ನನ್ನ ಬಳಿಗೂ ಕೆಲವರು ಜೆಎಸ್‌ಟಿ ಇತ್ಯಾದಿ ವಿಚಾರಗಳನ್ನು ಪುಟ 2ಕ್ಕೆ

ಫಾರ್ಮ್ 7 ದುರ್ಬಳಕೆ

ಎಸ್‌ಐಆರ್ ಪ್ರಕ್ರಿಯೆಯಲ್ಲಿ ಚುನಾವಣಾ ಆಯೋಗದ ಫಾರ್ಮ್–7 ದುರ್ಬಳಕೆ ಮಾಡಲಾಗಿದೆ. ಫಾರ್ಮ್–7 ಹೇಗೆ ದುರ್ಬಳಕೆಯಾಗಿದೆ ಎಂಬ ದಾಖಲೆಗಳನ್ನು ಹೈಕಮಾಂಡ್ ಗಮನಕ್ಕೆ ತರುತ್ತೇನೆ. ಎಲ್ಲ ದಾಖಲೆಗಳನ್ನು ತಂದಿದ್ದೇನೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು. ಬಿಜೆಪಿ ನಾಯಕರು ಯಾಕೆ ಪ್ರಕರಣ ದಾಖಲಿಸುತ್ತಿದ್ದೀರಿ ಎಂದು ಪ್ರಶ್ನಿಸುತ್ತಿದ್ದಾರೆ. ಈ ವಿಚಾರದಲ್ಲಿ ತನಿಖೆ ನಡೆಸಲಾಗುವುದು. ಈ ಅಕ್ರಮದಲ್ಲಿ ರಾಜ್ಯ ಪಾಲರನ್ನು ಭೇಟಿಯಾದ ಕೆಲವು ನಾಯಕರೇ ಭಾಗಿಯಾಗಿದ್ದಾರೆ. ತಮ್ಮ ಹೆಸರು ಬಯಲಿಗೆ ಬರುತ್ತದೆ ಎಂಬ ಕಾರಣಕ್ಕೆ ತನಿಖೆ ಬೇಡ ಎನ್ನುತ್ತಿದ್ದಾರೆ ಎಂದರು.

ನೈಸ್ ಕಂಪನಿ ಮಾಲೀಕ ಟ್ರ್ಯಾಪ್ ಮಾಡೋಕೆ ಬಂದಿದ್ರಾ?

ನವದೆಹಲಿ: ನೈಸ್ ಅಕ್ರಮಗಳ ದಾಖಲೆ ಬಿಡುಗಡೆಯಿಂದ ಸಿಎಂ ಡಿ.ಕೆ.ಶಿವಕುಮಾರ್ ಅವರಿಗೆ ಮುಜುಗರ ಆಗಿದೆ. ಅದನ್ನು ಮರೆಮಾಚಲು ಟ್ರ್ಯಾಪ್ ಆರೋಪದಂತಹ ಸುದ್ದಿ ಹರಡುತ್ತಿದ್ದಾರೆ ಎಂದು ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ತಿರುಗೇಟು ನೀಡಿದರು.

ದೆಹಲಿಯಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ನನ್ನ ವಿರುದ್ಧವೇ ಸ್ಟಿಂಗ್ ಆಪರೇಷನ್ ಮಾಡಲು ಯತ್ನಿಸಿದ್ದರು ಎನ್ನುವ ಡಿಕೆ ಶಿವಕುಮಾರ್ ಹೇಳಿಕೆಗೆ ಪ್ರತಿಕ್ರಿಯಿಸಿದರು. ಕ್ಯಾಬಿನೆಟ್ ನಲ್ಲಿ ಚರ್ಚೆ ಆಗಿದ್ದು ಮಾಧ್ಯಮದಲ್ಲಿ ಬರಲು ಕಾರಣ ಏನು? ನೈಸ್ ಸುದ್ದಿ ಮುನ್ನಲೆಗೆ ಬರಬಾರದು ಎನ್ನುವುದು ಅವರ ಉದ್ದೇಶ ಎಂದು ಕುಟುಕಿದರು.

ನನ್ನನ್ನು ಟ್ರ್ಯಾಪ್ ಮಾಡುತ್ತಿದ್ದಾರೆ. ಪಿತಾಮಹ ಯಾರು ಅಂತಾ ಗೊತ್ತಿದೆ ಎಂದಿದ್ದಾರೆ. ಯಾರು ಆ ಪಿತಾಮಹ ಜನರ ಮುಂದೆ ಇಡಿ. ಅವರನ್ನು ಏಕೆ ಹಿಡಿಲಿಲ್ಲ. ಕಂಡು ಕಂಡು ಯಾಕೆ ಬಿಟ್ಟಿರಿ. ನೈಸ್ ಕಂಪನಿ ಮಾಲೀಕ ನಿಮ್ಮನ್ನ ಭೇಟಿ ಮಾಡಲು ಬಂದಿದ್ದ ದೃಶ್ಯ ನೋಡಿದೆ. ಪುಟ 2ಕ್ಕೆ

ಸೂತ್ರದಾರರು ಯಾರು?: ವಿಜಯೇಂದ್ರ ತಿರುಗೇಟು

ಬಾಗಲಕೋಟೆ: ರಮೇಶ್ ಜಾರಕಿಹೊಳಿ ಪ್ರಕರಣದಲ್ಲಿ ಯಾರು ಸ್ಟಿಂಗ್ ಆಪರೇಷನ್ ಮಾಡಿಸಿದ್ದು ಎಂಬುದು ರಾಜ್ಯದ ಜನತೆಗೆ ಗೊತ್ತಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸಿಎಂ ಡಿ.ಕೆ.ಶಿವಕುಮಾರ್ ವಿರುದ್ಧ ವಾಗ್ದಾಳಿ ನಡೆಸಿದರು.

ಸಚಿವರು ಸ್ಟಿಂಗ್ ಆಪರೇಷನ್ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂಬ ಡಿಕೆಶಿ ಹೇಳಿಕೆಗೆ ತಿರುಗೇಟು ನೀಡಿದ ವಿಜಯೇಂದ್ರ, ತಮ್ಮದೇ ಶಾಸಕರ ಮೇಲೆ ಸ್ಟಿಂಗ್ ಮಾಡಿಸ್ತಾರೋ ಅಥವಾ ಡಿಂಗ್ ಡಿಂಗ್ ಆಪರೇಷನ್ ಮಾಡ್ತಾರೋ? ಇವೆಲ್ಲದರ ಹಿಂದಿರುವ ಸೂತ್ರಧಾರಿಗಳು ಯಾರು ಎಂಬುದು ಜನರಿಗೆ ತಿಳಿದಿದೆ. ತಮ್ಮ ಸ್ಥಾನವನ್ನು ಉಳಿಸಿಕೊಳ್ಳಲು ಯಾರು ಸ್ಟಿಂಗ್ ಮಾಡ್ತಾರೆ, ಯಾವ ಹಂತಕ್ಕೆ ಬೇಕಾದರೂ ಇಳಿಯುತ್ತಾರೆ ಎಂಬುದನ್ನು ಮುಂದಿನ ದಿನಗಳಲ್ಲಿ ರಾಜ್ಯದ ಜನರು ಕಣ್ಣಾರೆ ನೋಡಲಿದ್ದಾರೆ ಪುಟ 2ಕ್ಕೆ



ಅಭ್ಯರ್ಥಿಯಿಂದ 80 ಲಕ್ಷಕ್ಕೆ ಬ್ಲಾಂಕ್ ಚೆಕ್ ಪಡೆದಿದ್ದ ಕನ್ನಾಳೆ

ಬೆಂಗಳೂರು: ಕೆಪಿಎಸ್‌ಸಿ ಹಗರಣ ಪ್ರಕರಣದಲ್ಲಿ ಮತ್ತೊಂದು ಸ್ಫೋಟಕ ವಿಚಾರ ಬೆಳಕಿಗೆ ಬಂದಿದೆ. ಬಸವರಾಜ್ ಕನ್ನಾಳೆ ಅಭ್ಯರ್ಥಿ ಬಳಿ 80 ಲಕ್ಷಕ್ಕೆ ಬ್ಲಾಂಕ್ ಚೆಕ್ ಪಡೆದು ಕೊಂಡಿರುವುದು ತನಿಖೆಯಲ್ಲಿ ಬಯಲಾಗಿದೆ.

ಅಭ್ಯರ್ಥಿ ಕಿರಣ್ ಗೌಡ ಬಳಿಯಲ್ಲಿ ಕನ್ನಾಳೆ 80 ಲಕ್ಷದ ಬ್ಲಾಂಕ್ ಚೆಕ್ ಪಡೆದಿದ್ದ. ಚೆಕ್‌ನ ಜೊತೆಗೆ ಪ್ರಾಮಿಸರಿ ನೋಟ್ ಅನ್ನು ಕಿರಣ್ ಗೌಡ ಕೊಟ್ಟಿದ್ದ. ಕಿರಣ್ ಗೌಡ ನೀಡಿದ್ದ ಚೆಕ್ ಮತ್ತು ಪ್ರಾಮಿಸರಿ ನೋಟ್ ಮಾಧ್ಯಮಗಳಿಗೆ ಸಿಕ್ಕಿವೆ.

ಅಭ್ಯರ್ಥಿಗಳ ಜೊತೆಯಲ್ಲಿ ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಶಿವಶಂಕರಪ್ಪ ಸಾಹುಕಾರ್, ಸದಸ್ಯೆ ಗೀತಾ ಹಾಗೂ ಮಧ್ಯವರ್ತಿಗಳು ಡೀಲ್‌ಗೆ ಇಳಿದಿದ್ದರು. ಪ್ರತಿಯೊಬ್ಬರು ಕೂಡ 80 ಅಂಕದ ಪ್ರಶ್ನೆಗಳನ್ನು ಪಡೆದಿದ್ದರು. ಪ್ರಶ್ನೆಪತ್ರಿಕೆ ಮಾರಾಟ ಮಾಡುವ ಮುನ್ನ ಬಸವರಾಜ್ ಕನ್ನಾಳೆ ಮುಂಗಡ ಹಣವನ್ನು ಪಡೆದಿದ್ದ.

ಮೋದಿ, ಜ್ಞಾನೇಶ್, ಶಾಗೆ ಕಾನೂನು ಕುಣಿಕೆ: ರಾಹುಲ್

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಗೃಹ ಸಚಿವ ಅಮಿತ್ ಶಾ, ಚುನಾವಣಾ ಆಯೋಗದ ಮುಖ್ಯಸ್ಥ ಜ್ಞಾನೇಶ್ ಕುಮಾರ್ ಹಾಗೂ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರನ್ನು ಕಾನೂನಿನ ಮುಂದೆ ತರುತ್ತೇವೆ ಎಂದು ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಗುಡುಗಿದರು.

ಮಾಧ್ಯಮಗಳ ಜೊತೆ ಮಾತನಾಡಿದ ರಾಹುಲ್ ಗಾಂಧಿ, ಸುಮಾರು 300 ಸಂಸದರು ಶಾಂತಿಯುತ ಪ್ರತಿಭಟನೆ ನಡೆಸಲು ಬಯಸಿದ್ದರು. ಆದರೆ ಎರಡು ದಿನಗಳಿಂದ ಪ್ರತಿಭಟನೆಗೆ ಅವಕಾಶ ನೀಡಲಿಲ್ಲ ಎಂದರು.

ಮೊದಲ ದಿನ ಚುನಾವಣಾ ಆಯೋಗದ ಎದುರು ಪ್ರತಿಭಟನೆ ನಡೆಸಲು ಮುಂದಾದಾಗ ತಡೆಯಲಾಯಿತು. ಬಳಿಕ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸಲು ಬಯಸಿದಾಗಲೂ ತಡೆಯಲಾಗಿದೆ. ತಮ್ಮ ಪಕ್ಷದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಅವರು ಆರೋಪಿಸಿದ್ದಾರೆ.

ನರೇಂದ್ರ ಮೋದಿ, ಅಮಿತ್ ಶಾ, ಜ್ಞಾನೇಶ್ ಕುಮಾರ್ ಮತ್ತು ಮೋಹನ್ ಭಾಗವತ್ ಅವರು ಕ್ರಿಮಿನಲ್ ಸಂಚು ನಡೆಸಿ ದೇಶವನ್ನು ಹೈಜಾಕ್ ಮಾಡಿದ್ದಾರೆ. ಸಂವಿಧಾನವನ್ನು ನಾಶ ಮಾಡಲು ಮುಂದಾಗಿದ್ದಾರೆ ಹಾಗೂ ಮತ ಕಳ್ಳತನ ಮಾಡಿದ್ದಾರೆ ಎಂದು ರಾಹುಲ್ ಗಾಂಧಿ ಕಿಡಿಕಾರಿದರು.

ಎಸ್‌ಐಆರ್ ವಿರುದ್ಧ ರಣಕಹಳೆ

ಬೆಂಗಳೂರು: ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಎಸ್‌ಐಆರ್ ವಿರೋಧಿಸಿ ಸಿಜೆಪಿ ಸೇರಿದಂತೆ ವಿವಿಧ ಸಂಘಟನೆಗಳು ಗುರುವಾರ ಆಯೋಜಿಸಿದ್ದ ಜನತಾ ನ್ಯಾಯಾಲಯದಲ್ಲಿ ಸಾವಿರಾರು ಮಂದಿ ಪಾಲ್ಗೊಂಡಿದ್ದರು.

ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಅನ್ನು ರದ್ದು ಪಡಿಸಬೇಕು. ಮತಪತ್ರಗಳ ಮೂಲಕ ಚುನಾವಣೆ ನಡೆಸಬೇಕು ಎಂದು ಒಕ್ಕೊರಲಿನಿಂದ ಆಗ್ರಹಿಸಿದರು.

ಚುನಾವಣಾ ಆಯೋಗ ಬಿಜೆಪಿಯ

"ಪ್ರಜಾಪ್ರಭುತ್ವದ ಹಬ್ಬ" ಸಂದೇಶ: ಫಲಪುಷ್ಪಗಳಲ್ಲಿ ಅರಳಲಿದೆ ವಿಧಾನಸೌಧ

ಮೈಸೂರು: ಪ್ರಜಾಪ್ರಭುತ್ವದ ಹಬ್ಬದ ಸಂದೇಶದೊಂದಿಗೆ ಅ.11ರಿಂದ ಬರೋಬ್ಬರಿ ಹತ್ತು ದಿನಗಳ ಕಾಲ ನಡೆಯುವ ದಸರಾ ಫಲಪುಷ್ಪ ಪ್ರದರ್ಶನದಲ್ಲಿ ವಿಧಾನಸೌಧದ ಮಾದರಿ ಸೇರಿ ಅನೇಕ ಮಾದರಿಗಳು ಪ್ರವಾಸಿಗರ ಸೆಳೆಯಲಿವೆ.

ಈ ಕುರಿತ ಭಿತ್ತಿಪತ್ರವನ್ನು ನಗರದ ಕರ್ಜನ್ ಪಾರ್ಕ್ ಡಾ. ಎಂ. ಹೆಚ್. ಮರೀಗೌಡ ಸಭಾಂಗಣದಲ್ಲಿ ಬಿಡುಗಡೆಗೊಳಿಸಿದ ತೋಟಗಾರಿಕೆ ಜಂಟಿ ನಿರ್ದೇಶಕಿ ಕೆ.ಎನ್.ರೂಪಶ್ರೀ ಮಾತನಾಡಿ, ದಸರಾ ಮಹೋತ್ಸವ 2026ರ ಪ್ರಯುಕ್ತ "ಪ್ರಜಾಪ್ರಭುತ್ವದ ಹಬ್ಬ" ವಿಷಯಾಧರಿತ ಪರಿಕಲ್ಪನೆಯಲ್ಲಿ ದಸರಾ ಫಲಪುಷ್ಪ ಪ್ರದರ್ಶನವನ್ನು ಅ.11 ರಿಂದ 21 ರವರೆಗೆ ನಗರದ ಕುಪ್ಪಣ್ಣ ಪಾರ್ಕ್ ನಲ್ಲಿ ಆಯೋಜಿಸಲಾಗುತ್ತಿದೆ. ಅ.11 ರಂದು ಬೆಳಿಗ್ಗೆ 12.30 ಗಂಟೆಗೆ ಕುಪ್ಪಣ್ಣ ಪಾರ್ಕ್‌ನ ಗಾಜಿನ ಮನೆಯಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಫಲಪುಷ್ಪ ಪ್ರದರ್ಶನವನ್ನು ವಿದ್ಯುಕ್ತವಾಗಿ ಉದ್ಘಾಟಿಸಲಿದ್ದಾರೆ. ಈ ವೇಳೆ ಉಪ ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರು ಭಾಗವಹಿಸಲಿದ್ದಾರೆ ಎಂದು ತಿಳಿಸಿದರು.

ಈ ಬಾರಿ 2 ಲಕ್ಷ ಕೆಂಪು ಗುಲಾಬಿ 4 ಸಾವಿರ ಸೇವಂತಿಗೆ ಹಾಗೂ 25 ಸಾವಿರ ಗ್ರೀನ್ ಫೋಲಿಯಜ್ ಗಳನ್ನು ಬಳಸಿ ವಿಧಾನಸೌಧ ಮಾದರಿಯ ಪುಷ್ಪ ಪರಿಕಲ್ಪನೆಯನ್ನು ಗಾಜಿನಮನೆಯಲ್ಲಿ ನಿರ್ಮಿಸಲಾಗುವುದು.

ಗಾಜಿನಮನೆ ಹೊರಗಡೆ ಚಿಕ್ಕ ಗಡಿಯಾರ ಮಾದರಿಯ ಪುಷ್ಪ, ನಾಲ್ವಡಿ ಕೃಷ್ಣರಾಜ ಒಡೆಯರ್ ಪುಷ್ಪಕೃತಿ, ಪ್ರಜಾಪ್ರಭುತ್ವದ ಮೂರು ಸ್ತಂಭಗಳು, ಮತದಾನ ಪಟ್ಟಿಗೆ ಮತ್ತು ವಿದ್ಯುನ್ಮಾನ ಮತಯಂತ್ರಗಳು ಹಾಗೂ ನನ್ನ ಮತ-ನನ್ನ ಹಕ್ಕು-ನನ್ನ ಹೊಣೆ ಘೋಷವಾಕ್ಯದೊಂದಿಗೆ ಮತದಾನ ಜಾಗೃತಿ ಫಲಪುಷ್ಪ ಪ್ರತಿಕೃತಿ ಸೇರಿ ಹಲವಾರು ಪುಷ್ಪ ಪ್ರದರ್ಶನಗಳು ಪ್ರವಾಸಿಗರನ್ನು ಆಕರ್ಷಣೆ ಮಾಡಲಿದೆ. ನಗರದ ಲಿಂಗಾಂಬುಧಿ ಸಸ್ಯ ಶಾಸ್ತ್ರೀಯ ತೋಟದಲ್ಲಿಯೂ ಕೂಡ ನಾಡಹಬ್ಬ ಮೈಸೂರು ದಸರಾ ಆಚರಣೆ ಪ್ರಯುಕ್ತ "ಪುಷ್ಪ ಮೇಳ ಮತ್ತು ಸಸ್ಯತೋಟ ಭೇಟಿ" ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಅ.11 ರಂದು ಮಧ್ಯಾಹ್ನ 1 ಗಂಟೆಗೆ ನಗರಾಭಿವೃದ್ಧಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ವಿದ್ಯುಕ್ತವಾಗಿ ಉದ್ಘಾಟಿಸಲಿದ್ದಾರೆ ಎಂದು ತಿಳಿಸಿದರು.

ಈ ಬಾರಿ ವಯಸ್ಕರಿಗೆ 60ರೂ. ಹಾಗೂ ಮಕ್ಕಳಿಗೆ (6-12ವರ್ಷ) 30ರೂ. ಹಾಗೂ ಶಾಲಾ ಸಮವಸ್ತ್ರ ಧರಿಸಿ ಬರುವ ಮಕ್ಕಳಿಗೆ ಬೆಳಗ್ಗೆ 9 ರಿಂದ ಮಧ್ಯಾಹ್ನ 1 ಗಂಟೆಯವರೆಗೆ ಉಚಿತ ಪ್ರವೇಶ ಇರಲಿದೆ ಎಂದು ತಿಳಿಸಿದರು. ಸುದ್ದಿಗೋಷ್ಠಿಯಲ್ಲಿ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕ ಸಿ.ನವೀನ್, ಸಹಾಯಕ ತೋಟಗಾರಿಕೆ ನಿರ್ದೇಶಕ ಆರ್.ಮಂಜುನಾಥ್, ರಂಗಸಮುದ್ರ ತೋಟಗಾರಿಕೆ ಉಪನಿರ್ದೇಶಕ ವಿಜಯೇಂದ್ರ ಕುಮಾರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ

ಇಲಾಖೆ ಸಹಾಯಕ ನಿರ್ದೇಶಕಿ ನಿರ್ಮಲಾ, ಹಿರಿಯ ಸಹಾಯಕ ನಿರ್ದೇಶಕ ಗುರುಸ್ವಾಮಿ ಸೇರಿ ಇತರರು ಇದ್ದರು.



ಮೊದಲ ಪುಟದಿಂದ

ಅಂಬಾರಿ ಹೊರಲ್ಲ

ಜವಾಬ್ದಾರಿಯಿಂದ ದೂರ ಉಳಿಸಲಾಗುವುದು. ಗೋಪಿ, ಶ್ರೀರಾಮ ಆನೆಗಳು ಕಾಲು ನೋವು ಇರುವ ಕಾರಣ ಅವುಗಳನ್ನು ದೂರ ಇರಿಸಲಾಗಿದೆ ಎಂದು ಡಿಸಿಎಫ್ ಪ್ರಭುಗೌಡ ತಿಳಿಸಿದರು.

ನನ್ನ ವಿರುದ್ಧವೇ ಸ್ಟಿಂಗ್ ಆಪರೇಷನ್

ಮಾತನಾಡಲು ಬಂದಿದ್ದರು. ನನ್ನಿಂದಲೇ ಈ ಸ್ಟಿಂಗ್ ಆಪರೇಷನ್ ಆರಂಭಿಸಲು ಯತ್ನಿಸಿದ್ದರು ಎಂದು ತಿಳಿಸಿದರು. ನನಗೆ ಅವರ ಮೇಲೆ ಮುಂಚಿತವಾಗಿಯೇ ಅನುಮಾನ ಬಂದ ಹಿನ್ನೆಲೆಯಲ್ಲಿ, ಪೊಲೀಸರ ಮೂಲಕ ಸಂಪೂರ್ಣ ಮಾಹಿತಿ ಪಡೆದು ಎಲ್ಲಾ ದಾಖಲೆಗಳು ಹಾಗೂ ಫೋಟೋಗಳನ್ನು ಸಿದ್ಧಪಡಿಸಿ ಇಟ್ಟುಕೊಂಡಿದ್ದೇನೆ. ಅಗತ್ಯ ಬಿದ್ದರೆ ಫೋಟೋಗಳನ್ನು ಬಿಡುಗಡೆ ಮಾಡುತ್ತೇನೆ. ಈ ಷಡ್ಯಂತ್ರದ ಹಿಂದೆ ಯಾರಿದ್ದಾರೆ, ಯಾರು ಇದಕ್ಕೆ ಹಣಕಾಸು ಒದಗಿಸುತ್ತಿದ್ದಾರೆ ಇದರ ಪಿತಾಮಹ ಯಾರು ಎಂಬುದು ನನಗೆ ಸ್ಪಷ್ಟವಾಗಿ ತಿಳಿದಿದೆ ಎಂದರು. ಇದರಲ್ಲಿ ಕರ್ನಾಟಕದವರೇ ಇದ್ದಾರಾ ಅಥವಾ ಹೊರರಾಜ್ಯದವರಾ ಎಂಬ ವಿವರಗಳನ್ನು ಈಗಲೇ ಬಹಿರಂಗಪಡಿಸುವುದಿಲ್ಲ. ಕಾಲವೇ ಎಲ್ಲದಕ್ಕೂ ತಕ್ಕ ಉತ್ತರ ನೀಡಲಿದೆ ಎಂದು ತಿಳಿಸಿದರು.

ಟ್ರ್ಯಾಪ್ ಮಾಡೋಕೆ ಬಂದಿದ್ರಾ?

ಅವರೂ ನಿಮ್ಮನ್ನ ಟ್ರ್ಯಾಪ್ ಮಾಡಲು ಬಂದಿದ್ದರೇ? ಕುಂಬಳಕಾಯಿ ಕಳ್ಳರಂತೆ ಅವರೇ ವರ್ತಿಸುತ್ತಿದ್ದಾರೆ ಎಂದು ತಿರುಗೇಟು ನೀಡಿದರು.

ನೀರಿನ ಮಟ್ಟ ಅರ್ಧಕ್ಕೆ ಕುಸಿತ

ಒಟ್ಟು ಸಾಮರ್ಥ್ಯದ ಅರ್ಧ ಭಾಗದಷ್ಟೂ ನೀರು ಮಾತ್ರ ಸಂಗ್ರಹವಾಗಿರುವುದು ಕಳವಳಕ್ಕೆ ಕಾರಣವಾಗಿದೆ.

ಕಾವೇರಿ ಜಲಾನಯನ ಪ್ರದೇಶದಲ್ಲಿ ಮಳೆ ತಗ್ಗಿರುವ ಹಿನ್ನೆಲೆಯಲ್ಲಿ ಜಲಾಶಯಕ್ಕೆ ಬರುತ್ತಿರುವ ನೀರಿನ ಪ್ರಮಾಣ ತೀರಾ ಕುಸಿದಿದೆ. ಸದ್ಯ ಡ್ಯಾಂಗೆ ಕೇವಲ 590 ಕ್ಯೂಸೆಕ್ ಒಳಹರಿವು ಮಾತ್ರ ದಾಖಲಾಗುತ್ತಿದೆ. ಆದರೆ, ನದಿಗೆ ಮತ್ತು ನಾಲೆಗಳಿಗೆ ಸೇರಿ ಬರೋಬ್ಬರಿ 3,141 ಕ್ಯೂಸೆಕ್ ನೀರನ್ನು ಹೊರಬಿಡಲಾಗುತ್ತಿದೆ. ಒಳಹರಿವಿಗಿಂತ ಹೊರಹರಿವಿನ ಪ್ರಮಾಣ ಹೆಚ್ಚಾಗಿರುವುದರಿಂದ ದಿನದಿಂದ ದಿನಕ್ಕೆ ನೀರಿನ ಮಟ್ಟ ವೇಗವಾಗಿ ಇಳಿಯುತ್ತಿದೆ. ಇದೇ ಪರಿಸ್ಥಿತಿ ಮುಂದುವರಿದರೆ ಮುಂದಿನ ದಿನಗಳಲ್ಲಿ ಕೃಷಿಗಷ್ಟೇ ಅಲ್ಲ, ರಾಜಧಾನಿ ಬೆಂಗಳೂರು ಸೇರಿದಂತೆ ಸುತ್ತಮುತ್ತಲಿನ ನಗರ-ಪಟ್ಟಣಗಳ ಕುಡಿಯುವ ನೀರಿಗೂ ತತ್ವಾರ ಎದುರಾಗುವ ಭೀತಿ ಇದೆ.

ತ.ನಾಡಿಗೆ ಮತ್ತಷ್ಟು ನೀರು ಬಿಡಿ

ತಮಿಳುನಾಡಿಗೆ ನಿತ್ಯ 3 ಸಾವಿರ ಕ್ಯೂಸೆಕ್ ನೀರು ಹರಿಸಬೇಕಾಗಿದೆ. ಈಗಾಗಲೇ ನೀರಿನ ಬರದಿಂದ ಕಂಗೆಟ್ಟಿರುವ ಕರ್ನಾಟಕಕ್ಕೆ ಗಾಯದ ಮೇಲೆ ಬರೆ ಎಳೆದಿದೆ.

ಈ ಹಿಂದೆ ತಮಿಳುನಾಡಿಗೆ ಪ್ರತಿದಿನ 4 ಸಾವಿರ ಕ್ಯೂಸೆಕ್ ನೀರು ಹರಿಸುವಂತೆ ಆದೇಶ ನೀಡಿತ್ತು. ಆದರೆ ಇದಕ್ಕೆ ವಿರೋಧ ವ್ಯಕ್ತಪಡಿಸಿದ್ದ ಕರ್ನಾಟಕ ನೀರಿನ ಪ್ರಮಾಣವನ್ನು 2 ಸಾವಿರ ಕ್ಯೂಸೆಕ್ ಗೆ ಇಳಿಸುವಂತೆ ಮನವಿ ಮಾಡಿತ್ತು.

ಕಾವೇರಿ ಜಲಾಶಯಗಳಿಗೆ ಒಳಹರಿವು ತೀವ್ರವಾಗಿ ಕ್ಷೀಣಿಸಿದೆ. ಕೆಆರ್‌ಎಸ್ ಸೇರಿದಂತೆ ಕಾವೇರಿ ಕೊಳ್ಳದ ಪ್ರಮುಖ 4 ಜಲಾಶಯಗಳಲ್ಲಿ ಲಭ್ಯವಿರುವ ನೀರು ಕೇವಲ 49 ಟಿಎಂಸಿ ಮಾತ್ರ. ಈ ನೀರನ್ನು ಮುಂದಿನ ಜೂನ್ ವರೆಗೆ ಕುಡಿಯಲು ಕಾಯ್ದಿರಿಸುವುದು ಅನಿವಾರ್ಯವಾಗಿದೆ ಎಂದು ಮನವಿಯಲ್ಲಿ ತಿಳಿಸಿತ್ತು.

ಕಾವೇರಿ ಕಣಿವೆಯ 47 ತಾಲೂಕುಗಳನ್ನು ತೀವ್ರ ಬರಪೀಡಿತ ಎಂದು ಘೋಷಣೆ ಮಾಡಲಾಗಿದೆ. ಮತ್ತೆ ಕೆಆರ್‌ಎಸ್ ಮತ್ತು ಕಬಿನಿ ಜಲಾಶಯಗಳಿಂದ ಗಣನೀಯ ನೀರು ಬಿಡುಗಡೆ ಮಾಡಲು ಸಾಧ್ಯವಿಲ್ಲ. ತಮಿಳುನಾಡಿನಲ್ಲಿ ಈಶಾನ್ಯ ಮಾನ್ಸೂನ್ ಉತ್ತಮವಾಗಿರುವ ಭರವಸೆ ಇರುವ ಕಾರಣ ಬಿಳಿಗುಂಡ್ಲುವಿನಲ್ಲಿ ಹರಿಸಬೇಕಾದ ನೀರಿನ ಪ್ರಮಾಣವನ್ನು ಇಳಿಸಿ ಎಂದು ಕರ್ನಾಟಕ ಮನವಿ ಮಾಡಿತ್ತು. ಆದರೆ ರಾಜ್ಯದ ಮನವಿಗೆ ಕಾವೇರಿ ನೀರು ನಿಯಂತ್ರಣ ಸಮಿತಿ ಸ್ಪಂದಿಸಿಲ್ಲ.

ಸೂತ್ರದಾರರು ಯಾರು?:

ಎಂದು ಹೇಳಿದರು. 2028ಕ್ಕೆ ನಮ್ಮದೇ ಸರ್ಕಾರ ಬರುತ್ತದೆ, ನಾನೇ ಸಿಎಂ ಆಗುತ್ತೇನೆ ಎಂಬ ಡಿಕೆಶಿ ಹೇಳಿಕೆಗೆ, ಡಿಕೆಶಿ ಅವರು ಸಿಎಂ ಆಗುವುದಕ್ಕೆ ನನ್ನದೇನೂ ತಕರಾರಿಲ್ಲ. ಆದರೆ, ಡಿಕೆಶಿ ಅವರೇ, ಮೊದಲು ನಿಮ್ಮ ಈ ಸ್ಟಿಂಗ್ ಆಪರೇಷನ್ ಬದಿಗಿಟ್ಟು ಜನರಿಗೆ ಸರಿಯಾಗಿ ಆಡಳಿತ ಕೊಡುವುದನ್ನು ಕಲಿಯಿರಿ ಎಂದರು.

ನಿಮ್ಮನ್ನು ಸಿಎಂ ಮಾಡಲು ಸಿದ್ದರಾಮಯ್ಯ ಬಿಡಬೇಕಲ್ಲ? ಈಗಾಗಲೇ ಹಿರಿಯ ಸಚಿವ ಎಚ್.ಕೆ.ಪಾಟೀಲ್ ಬರೆದ ಪತ್ರ, ರಾಯರೆಡ್ಡಿ ಹೇಳಿಕೆ ಹಾಗೂ ಬಿ.ಆರ್. ಪಾಟೀಲ್ ಅವರ ಮುನಿಸು ನೋಡಿದರೆ ಕಾಂಗ್ರೆಸ್‌ನ ಹಿರಿಯ ನಾಯಕರೆಲ್ಲರೂ ಆಂತರಿಕ ದಂಗೆ ಏಳುತ್ತಿರುವುದು ಸ್ಪಷ್ಟವಾಗಿದೆ ಎಂದು ವ್ಯಂಗ್ಯವಾಡಿದರು.

ಅಪಘಾತ ತಪ್ಪಿಸಲು ಕ್ರಮವಹಿಸಿ

ಅಧಿಕಾರಿಗಳಿಗೆ ರಾಮನಗರ ಜಿಲ್ಲಾಧಿಕಾರಿ ನಿರ್ದೇಶನ

ರಾಮನಗರ: ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿ ಹಾಗೂ ಇತರೆ ಮುಖ್ಯ ರಸ್ತೆಗಳಲ್ಲಿ ವಾಹನ ಅಪಘಾತಗಳನ್ನು ಸಂಪೂರ್ಣವಾಗಿ ತಪ್ಪಿಸಲು ಸಾರಿಗೆ ಹಾಗೂ ಪೊಲೀಸ್ ಇಲಾಖೆ ಸೇರಿದಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಪರಸ್ಪರ ಸಮನ್ವಯದೊಂದಿಗೆ ಅಗತ್ಯ ಕ್ರಮಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್ ಅವರು ನಿರ್ದೇಶನ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಬೆಂಗಳೂರು ದಕ್ಷಿಣ ಜಿಲ್ಲಾ ಮಟ್ಟದ ರಸ್ತೆ ಸುರಕ್ಷತಾ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಸಭೆಯಲ್ಲಿ ಅಪರ ಪೊಲೀಸ್ ವರಿಷ್ಠಾಧಿಕಾರಿ ರಾಜೇಂದ್ರ, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಅಭಿಯಂತರರು ಸೇರಿದಂತೆ ಸಂಬಂಧಿಸಿದ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

ಜಿಲ್ಲಾಸ್ಪತ್ರೆ ಬಳಿ ಯೂ ಟರ್ನ್

ರಾಷ್ಟ್ರೀಯ ಹೆದ್ದಾರಿ 275ರಲ್ಲಿನ ರಾಮನಗರ ಜಿಲ್ಲಾ ಸರ್ಕಾರಿ ಆಸ್ಪತ್ರೆ ಎದುರು ರಸ್ತೆ ವಿಭಜಕ ತೆರವುಗೊಳಿಸಿ ಯು-ಟರ್ನ್ ವ್ಯವಸ್ಥೆ ಕಲ್ಪಿಸಬೇಕೆಂದು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ಲೋಕಸಭಾ ಸದಸ್ಯರು ಲೋಕೋಪಯೋಗಿ ಇಲಾಖೆಗೆ ಮನವಿ ಸಲ್ಲಿಸಿದ್ದು, ಈ ಕುರಿತು ಕ್ರಮವಹಿಸುವಂತೆ ಜಿಲ್ಲಾಧಿಕಾರಿಗಳು ಪೊಲೀಸ್ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಕಣಿಮಿಣಿಕೆ ಬಳಿ ರಸ್ತೆಗೆ ತ್ಯಾಜ್ಯ

ಬೆಂಗಳೂರು-ಮೈಸೂರು ರಾಷ್ಟ್ರೀಯ ಹೆದ್ದಾರಿಯ ಕಣಮಿಣಿಕೆಯ ಟೋಲ್ ಬಳಿ ತ್ಯಾಜ್ಯ ಸುರಿದಿರುವುದು ಕಂಡುಬಂದಿದೆ, ಟೋಲ್ ಬಳಿ ಇರುವ ವ್ಯಾಪಾರ ಮಳಿಗೆಗಳ ಬಳಿ ಹಸಿ ಕಸ-ಒಣ ಕಸ ಸಂಗ್ರಹಿಸುವ ಡಬ್ಬಿಗಳನ್ನು ಹೆಚ್ಚು ಹೆಚ್ಚು ಇಡಬೇಕು, ಎಲ್ಲೆಂದರಲ್ಲಿ ತ್ಯಾಜ್ಯ ಸುರಿಯುವವರ ವಿರುದ್ಧ ದಂಡ ವಿಧಿಸಬೇಕು. ಕಸ ಎಸೆಯುವವರನ್ನು ಗುರುತಿಸಲು ಹಾಗೂ ಹಿಮ್ಮುಖ ಚಾಲನೆ ಮಾಡುವವರನ್ನು ಗುರುತಿಸಲು ಟೋಲ್‌ನ ಸುತ್ತಮುತ್ತ ಸಿಸಿ ಟಿವಿ ಕ್ಯಾಮರಾಗಳನ್ನು ತೀವ್ರವಾಗಿ ಅಳವಡಿಸಬೇಕು, ರಾಷ್ಟ್ರೀಯ ಹೆದ್ದಾರಿಯಲ್ಲಿ ಸ್ವಚ್ಛತೆ ಕಾಪಾಡಲು ಕ್ರಮ ವಹಿಸಬೇಕು ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳಿಗೆ ಸೂಚಿಸಿದರು.

ಹೆದ್ದಾರಿ ರಸ್ತೆಯಲ್ಲಿ ಹಿಮ್ಮುಖ ಚಾಲನೆ ತಡೆಯಿರಿ

ರಾಷ್ಟ್ರೀಯ ಹೆದ್ದಾರಿಗಳಲ್ಲಿ ಹಿಮ್ಮುಖ (ರಿವರ್ಸ್ ಡ್ರೈವಿಂಗ್) ಚಾಲನೆ ಹಾಗೂ ಎದುರಾಗಿ (ಆಪೋಸಿಟ್ ಡ್ರೈವಿಂಗ್) ಚಾಲನೆ ಮಾಡುವುದರಿಂದಾಗಿ ಅಪಘಾತಗಳ ಸಂಖ್ಯೆ ಹೆಚ್ಚಾಗುವುದು ಕಂಡುಬಂದಿದೆ. ಇದರಿಂದ ಸರಿಯಾಗಿ ಚಾಲನೆ ಮಾಡುತ್ತಿರುವವರಿಗೂ ಗೊಂದಲಕ್ಕೀಡಾಗಿ ಜೀವ ಕಳೆದುಕೊಳ್ಳುವಂತಹ ಸಂದರ್ಭಗಳು ಎದುರಾಗುತ್ತದೆ. ಬೈ ಪಾಸ್ ರಸ್ತೆಗಾಗಿ ಕಿಲೋಮೀಟರ್ ತಪ್ಪಿಸಲು ರಸ್ತೆ ಮಾರ್ಗದ ವಿರುದ್ಧ ದಿಕ್ಕಿನಲ್ಲಿ ಸಾಗುವ ವಾಹನಗಳನ್ನು ಕಟ್ಟುನಿಟ್ಟಾಗಿ ನಿಯಂತ್ರಿಸುವಂತೆ ಅವರು ತಾಕೀತು ಮಾಡಿದರು. ಅಪಾಯಕಾರಿ ಹಿಮ್ಮುಖ ಚಾಲನೆ ಮಾಡುವ ವಾಹನ ಚಾಲಕರು ಹಾಗೂ ವಾಹನಗಳ ವಿರುದ್ಧ ಕಡ್ಡಾಯವಾಗಿ ದಂಡ ವಿಧಿಸುವುದರೊಂದಿಗೆ ಕಾನೂನಿನ ಪ್ರಕಾರ ಕ್ರಮಕೈಗೊಳ್ಳಬೇಕು, ಲಾರಿಗಳು ರಾಷ್ಟ್ರೀಯ ಹೆದ್ದಾರಿ ಬದಿಯಲ್ಲಿ ಎಲ್ಲೆಂದರಲ್ಲಿ ನಿಲ್ಲಿಸುವುದರಿಂದಲೂ ಅಪಘಾತಗಳಾಗುವ ಸಂಭವಗಳಿರುತ್ತದೆ. ಇಂತಹ ವಾಹನಗಳ ವಿರುದ್ಧವು ದಂಡ ವಿಧಿಸಬೇಕು. ಅಂತಹ ಚಾಲಕರ ಚಾಲನಾ ಪರವಾನಿಗೆ ರದ್ದುಪಡಿಸಬೇಕು. ರಸ್ತೆ ಸುರಕ್ಷತಾ ನಿಯಮಗಳನ್ನು ಪಾಲಿಸದೇ ಇರುವವರ ವಿರುದ್ಧ ದಂಡ ವಿಧಿಸಬೇಕು. ರಾಷ್ಟ್ರೀಯ ಹೆದ್ದಾರಿ ಗಸ್ತು ವಾಹನಗಳನ್ನು ಹೆಚ್ಚಿಸಬೇಕು ಎಂದು ಸಾರಿಗೆ ಹಾಗೂ ಪೊಲೀಸ್ ಇಲಾಖೆ ಅಧಿಕಾರಿಗಳಿಗೆ ಅವರು ಸೂಚಿಸಿದರು.

ಅ.13ರಿಂದ 16ವರೆಗೆ ಮಹಿಳಾ, ಮಕ್ಕಳ ದಸರಾ

ಮೈಸೂರು: ಮೈಸೂರು ದಸರಾ ಮಹೋತ್ಸವ 2026 ಹಿನ್ನೆಲೆ ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ವತಿಯಿಂದ ಅ.13ರಿಂದ 16ವರೆಗೆ ಮಹಿಳಾ ಮತ್ತು ಮಕ್ಕಳ ದಸರಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ

ಅ.13ರಂದು ಬೆಳಗ್ಗೆ 6.30ಕ್ಕೆ ಅಂಬಾವಿಲಾಸ ಅರಮನೆ ಮುಂಭಾಗ ರಂಗೋಲಿ ಚಿತ್ತಾರ ಸ್ಪರ್ಧೆಯನ್ನು ನಗರಾಭಿವೃದ್ಧಿ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಲಿದ್ದಾರೆ. ಶಾಸಕ ಟಿ.ಎಸ್.ಶ್ರೀವತ್ಸ ಕಾರ್ಯಕ್ರಮದ ಅಧ್ಯಕ್ಷತೆವಹಿಸಲಿದ್ದಾರೆ. ಬೆಳಗ್ಗೆ 11ಕ್ಕೆ ಜೆ.ಕೆ.ಮೈದಾನದಲ್ಲಿ ಮಹಿಳಾ ದಸರಾ ಭವ್ಯ ಉದ್ಘಾಟನೆಯನ್ನು ನಗರಾಭಿವೃದ್ಧಿ ಸಚಿವ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ನೆರವೇರಿಸಲಿದ್ದಾರೆ. ಶಾಸಕರಾದ ಕೆ.ಹರೀಶ್ ಗೌಡ ಅಧ್ಯಕ್ಷತೆವಹಿಸಲಿದ್ದಾರೆ. 11.30ಕ್ಕೆ ಮಹಿಳಾ ದಸರಾ ಮಳಿಗೆಗಳ ಉದ್ಘಾಟನೆಯನ್ನು ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಅಧ್ಯಕ್ಷರಾದ ಪದ್ಮಾವತಿ ನೆರವೇರಿಸಲಿದ್ದಾರೆ ಎಂದು ತಿಳಿಸಿದ್ದಾರೆ. ಅ.14ರಂದು ಬೆಳಗ್ಗೆ 10.30 ರಿಂದ ಜಿ-ಸ್ಕ್ವಾಡ್ ಮೈಸೂರು ತಂಡದವರಿಂದ ಪಂಚ ಗ್ಯಾರಂಟಿ ಬಗ್ಗೆ ಕಿರುನಾಟಕ ಪ್ರದರ್ಶನ, ಬೆಳಗ್ಗೆ 11 ರಿಂದ ತಾಯಿ ಮಗು-ಫ್ಯಾಷನ್ ಶೋ ಸ್ಪರ್ಧೆ(6 ವರ್ಷದೊಳಗಿನ ಮಕ್ಕಳೊಂದಿಗೆ), ಮಧ್ಯಾಹ್ನ 2.30 ರಿಂದ ರಾಗಿ ಮುದ್ದೆ ತಿನ್ನುವ ಸ್ಪರ್ಧೆ ಹಾಗೂ ಮಹಿಳೆಯರಿಂದ ಕೇಶಾಲಂಕಾರ ಸ್ಪರ್ಧೆ, 3 ರಿಂದ ಸಾಂಸ್ಕೃತಿಕ ನೃತ್ಯ ಮತ್ತು ಸಮೂಹ ನೃತ್ಯ ನಡೆಯಲಿದೆ. ಅ.15 ರಂದು ಬೆಳಗ್ಗೆ 10 ರಿಂದ ರಾಜ್ಯದ ಹಾಗೂ ಜಿಲ್ಲೆಯ ಪರಂಪರೆಯನ್ನು ಬಿಂಬಿಸುವ ವೇಷಭೂಷಣ ಧರಿಸಿ (ಕರ್ನಾಟಕ ಸಿಂಚನ, ವೈವಿಧ್ಯತೆಯ ದರ್ಶನ) ವಾಕಥಾನ್ (ಕಂಸಾಳೆಯೊಂದಿಗೆ) ಹಾಗೂ 11.30 ರಿಂದ ವಿಶೇಷ ಚೇತನ ಮಕ್ಕಳಿಂದ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಲಾಗಿದೆ. ಅ.16 ರಂದು 11 ರಿಂದ ಡಾ.ಬಾಬು ಸಾಹೇಬ್ ಅಂಬೇಡ್ಕರ್ ರವರ ಮಹಿಳಾ ಸಬಲೀಕರಣದ ಚಿಂತನೆಗಳ ಕುರಿತು ಡಾ.ಪದ್ಮ ಶೇಖರ್ ರವರಿಂದ ಸಂವಾದ, ನಡೆಯಲಿದೆ ಎಂದು ಮಹಿಳಾ ಮತ್ತು ಮಕ್ಕಳ ದಸರಾ ಉಪಸಮಿತಿ ಉಪವಿಶೇಷಾಧಿಕಾರಿ ತಿಳಿಸಿದ್ದಾರೆ.

ಡಾ.ಡಿ.ತಿಮ್ಮಯ್ಯ ಅಭಿಮತ

ಮತಹಕ್ಕಿನ ಶಕ್ತಿ ಸರಿಯಾಗಿ ಬಳಕೆಯಾಗಲಿ

ಮೈಸೂರು: ಭಾರತೀಯ ಸಂವಿಧಾನವು ಪ್ರತಿಯೊಬ್ಬ ಪ್ರಜೆಗೂ ಒಂದೇ ಮತದ ಹಕ್ಕನ್ನು ನೀಡಿ ಸಮಾನತೆಯನ್ನು ತಂದಿದೆ. ದೇಶದ ಪ್ರಧಾನಿ, ಮುಖ್ಯ ನ್ಯಾಯಮೂರ್ತಿಗಳಿಂದ ಹಿಡಿದು ಸಾಮಾನ್ಯ ಬಡವ, ಅನಕ್ಷರಸ್ಥರು ಕೂಡ ಒಂದೇ ಮತದ ಅಧಿಕಾರವನ್ನು ನೀಡ

ಆರೋಗ್ಯ ಭಾಗ್ಯವೇ ನಿಜವಾದ ಸಂಪತ್ತು: ಆನಂದ್ ಭಗೀರಥ್

ಚಾಮರಾಜನಗರ: ನಗರದ ಉಪ್ಪಾರ ಬೀದಿಯಲ್ಲಿ ಗಣಪತಿ ಮಹೋತ್ಸವದ ಪ್ರಯುಕ್ತ ಗರಡಿ ಟೈಗರ್ಸ್ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು.

ನಗರದ ಉಪ್ಪಾರ ಸಮುದಾಯದ ಭವನದಲ್ಲಿ ನಡೆದ ಆರೋಗ್ಯ ಶಿಬಿರದಲ್ಲಿ ನೂರಾರು ಮಂದಿ ತಪಾಸಣೆ ಮಾಡಿಸಿಕೊಂಡರು.ಎದೆಯ ಕ್ಷ-ಕಿರಣ ಪರೀಕ್ಷೆ, ಹಿಮೋ ಗ್ಲೋಬಿನ್ ಪರೀಕ್ಷೆ, ಸಕ್ಕರೆ ಕಾಯಿಲೆ ರಕ್ತ ಪರೀಕ್ಷೆ, ಬಿಪಿ, ಕಫ ಪರೀಕ್ಷೆ, ಉಚಿತ ಔಷಧಿ ವಿತರಣೆ ವೈದ್ಯರ ಜೊತೆ ಸಮಾಲೋಚನೆ ಮಾಡಲಾಯಿತು.ಅಗತ್ಯಯುಳ್ಳವರಿಗೆ ಔಷಧಿ ವಿತರಿಸಲಾಯಿತು. ಅಧ್ಯಕ್ಷತೆ ವಹಿಸಿದ್ದ ಶಿಬಿರದ ಅಯೋಜಕ, ಬಿಜೆಪಿ ಯುವ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದ್ ಭಗೀರಥ ಮಾತನಾಡಿ,ಆರೋಗ್ಯ ಭಾಗ್ಯವೇ ನಿಜವಾದ ಸಂಪತ್ತಾಗಿದ್ದು, ಪ್ರತಿಯೊಬ್ಬರೂ ಆರೋಗ್ಯದ ಕಡೆ ಗಮನಹರಿಸಬೇಕು ಎಂದು ಬಿಜೆಪಿ ಯುವಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಆನಂದ್ ಭೌಗೀರಥ ಸಲಹೆ ನೀಡಿದರು. ಇತ್ತೀಚಿನ ದಿನಗಳಲ್ಲಿ ಬಿಪಿ, ಶುಗರ್, ಹೃದಯಾಘಾತ ಹೆಚ್ಚಾಗುತ್ತಿದ್ದು, ಯಾವುದೇ ಲಕ್ಷಣ ಗೊತ್ತಾಗದಂತೆ. ಖಾಯಿಲೆಗಳು ಬರುತ್ತದೆ ಆಗಾಗಿ ಆಗಾಗ ಆರೋಗ್ಯ... ತಪಾಸಣೆ ಮಾಡಿಸಿ ಕೊಂಡರೆ ಕಾಯಿಲೆ ಬರುವ ಲಕ್ಷಣಗಳಿದ್ದರೆ ಚಿಕಿತ್ಸೆ ಪಡೆದು ರೋಗ ತಡೆಗಟ್ಟಬಹುದು ಎಂದರು. ಹಣ, ಆಸ್ತಿ, ಪಾಸ್ತಿ ಎಷ್ಟೇ ಇದ್ದರೂ ಉತ್ತಮ ಆರೋಗ್ಯವಿಲ್ಲದಿದ್ದರೆ. ಯಾವುದೇ ಪ್ರಯೋಜ ಇಲ್ಲ. ನಮ್ಮ ಉಪ್ಪಾರ ಬೀದಿಯ ನಿವಾಸಿಗಳಿಗೆ ಅನುಕೂಲವಾಗುವಂತೆ ಆರೋಗ್ಯ... ಶಿಬಿರವನ್ನು ಅಯೋಜಿಸಲಾಗಿದೆ. ಮುಂದಿನ ದಿನಗಳಲ್ಲಿ ಇಂತಹ ಕಾರ್ಯಕ್ರಮಗಳನ್ನು ಅಯೋಜಿಸಲಾಗುವುದು ಎಂದರು.

ಶಿಬಿರಕ್ಕೆ ಚಾಲನೆ ನೀಡಿದ ಕೆಇಬಿ ಲೆಕ್ಕಾಧಿಕಾರಿ ಎನ್.ಮಹೇಶ್ ಮಾತನಾಡಿ, ಗಣಪತಿ ಮಹೋತ್ಸವದ ಪ್ರಯುಕ್ತ ಗರಡಿ ಟೈಗರ್ಸ್ ವತಿಯಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಂಡಿರುವುದು ಬಹಳ ಅರ್ಥಪೂರ್ಣವಾದದ್ದು, ಬೀದಿಯ ಪ್ರತಿಯೊಬ್ಬರೂ ಇದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್, ನಗರಸಭಾ ಆರೋಗ್ಯ ನಿರೀಕ್ಷಕ ಮಂಜುನಾಥ್, ಪರಿಸರ ಪ್ರೇಮಿ ವೆಂಕಟೇಶ್, ಫೈನಾಫಲ್ ಮಂಜುನಾಥ್, ಡಾ.ಪ್ರಸನ್ನಕುಮಾರ್, ಡಾ.ಚಂದ್ರಶೇಖರ್, ಡಾ. ರಾಸಿಪ, ಡಾ.ಪ್ರಸನ್ನ, ಗರಡಿ ಟೈಗರ್ಸ್ ಅಧ್ಯಕ್ಷ ಯಶವಂತ್, ರಾಜೇಂದ್ರ ಅಧ್ಯಕ್ಷ, ಮಲ್ಲೇಶ್, ಪುರುಷೋತ್ತಮ, ನವೀನ್, ಸುರೇಶ್, ದರ್ಶನ, ಮೋಹನ್, ಪವನ್, ರಘು ಮೇಸ್ತ್ರಿ ಇತರರು ಹಾಜರಿದ್ದರು.

ವಂಚಕರ ಬಗ್ಗೆ ನಿಗಾ ವಹಿಸಿ

ಚಾಮರಾಜನಗರ, ಕೆಲಸ ಕೊಡಿಸುವುದಾಗಿ ನಂಬಿಸಿ ಹಣ ಪಡೆದು ವಂಚಿಸುವ ಬೃಹತ್ ಜಾಲ ಸಕ್ರಿಯವಾಗಿದ್ದು, ಇಂತಹ ಸೈಬರ್ ವಂಚಕರ ಬಗ್ಗೆ ತೀವ್ರ ನಿಗಾ ವಹಿಸುವಂತೆ ಸೈಬರ್ ಕ್ರೈಂ ಠಾಣೆಯ ಡಿ.ವೈ.ಎಸ್.ಪಿ. ಎಂ.ಎಸ್. ಪವನ್‌ಕುಮಾರ್ ಅವರು ತಿಳಿಸಿದರು.

ನಗರದ ಜೆ.ಎಸ್.ಎಸ್. ಮಹಿಳಾ ಕಾಲೇಜು ಹಾಗೂ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನಲ್ಲಿ ಸೈಬರ್ ಮಾಸಾಚರಣೆ ಪ್ರಯುಕ್ತ ಹಮ್ಮಿಕೊಳ್ಳಲಾಗಿದ್ದ ಜಾಗೃತಿ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು. ಖಾಯಂ ಉದ್ಯೋಗ, ಪಾರ್ಟ್‌ಟೈಮ್ ಹಾಗೂ ವರ್ಕ್ ಫ್ರಂ ಹೋಮ್ ಕೆಲಸ ಕೊಡಿಸುವುದಾಗಿ ಹಣ ಪಡೆದು ವಂಚಿಸುವ ಸೈಬರ್ ವಂಚಕರ ಬಗ್ಗೆ ಅತ್ಯಂತ ಎಚ್ಚರಿಕೆ ವಹಿಸಬೇಕೆಂದು ಹೇಳಿದರು.

ಲೈಂಗಿಕ ವಿಷಯ, ಖಾಸಗಿ ಫೋಟೋ ಅಥವಾ ವಿಡಿಯೋಗಳನ್ನು ಬಳಸಿಕೊಂಡು ಮಹಿಳೆಯರನ್ನು ಬೆದರಿಸಿ ಹಣ ಅಥವಾ ಮತ್ತಷ್ಟು ಖಾಸಗಿ ಚಿತ್ರಗಳು ಅಥವಾ ಲೈಂಗಿಕ ಅನುಕೂಲಕ್ಕೆ ಒತ್ತಾಯಿಸುವ ಸೈಬರ್ ವಂಚಕರ ಬಗ್ಗೆಯೂ ಹೆಚ್ಚಿನ ಜಾಗೃತಿ ವಹಿಸಬೇಕೆಂದು ಡಿ.ವೈ.ಎಸ್.ಪಿ ಅವರು ಸಲಹೆ ಮಾಡಿದರು.

ಅಪರಿಚಿತ ವ್ಯಕ್ತಿಗಳು ಬ್ಯಾಂಕಿನಿಂದ ಮಾತನಾಡುತ್ತಿರುವುದಾಗಿ ನಂಬಿಸಿ ಒ.ಟಿ.ಪಿ ಪಡೆದು ಗ್ರಾಹಕರ ಬ್ಯಾಂಕ್ ಖಾತೆಯಿಂದ ಹಣ ಲಪಟಾಯಿಸುವ ವಂಚನೆಯು ಹೆಚ್ಚಾಗುತ್ತಿದ್ದು, ಈ ಬಗ್ಗೆ ಜಾಗರೂಕರಾಗಿರಬೇಕೆಂದು ತಿಳಿಸಿದರು. ಆನ್‌ಲೈನ್‌ನಲ್ಲಿ ಹಣ ಹೂಡಿಕೆ ಮಾಡಿ ಹಣವನ್ನು ದ್ವಿಗುಣ ಮಾಡಿಕೊಡುವ ಬಗ್ಗೆ ವಂಚಿಸುವ ಪ್ರಕರಣಗಳು ಇತ್ತೀಚೆಗೆ ಹೆಚ್ಚಾಗುತ್ತಿವೆ. ಈ ಆಮಿಷಕ್ಕೆ ಯಾರು ಬಲಿಯಾಗಬಾರದೆಂದು ಡಿ.ವೈ.ಎಸ್.ಪಿ ಅವರು ಸಲಹೆ ನೀಡಿದರು. ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜಿನ ಪ್ರಾಂಶುಪಾಲರಾದ ಲೋಕೇಶ್, ಜೆ.ಎಸ್.ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ. ಪ್ರಭು, ಉಪನ್ಯಾಸಕ ವೃಂದದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ನಗರದ ಹಲೆವೆಡೆ ಕಳವು: ಕ್ರಮಕೈಗೊಳದಿದ್ದರೆ ಹೋರಾಟ

ಮೈಸೂರು: ನಗರದ ವಿವಿಧೆಡೆ ಕಟ್ಟಡ ನಿರ್ಮಾಣ ಹಾಗೂ ಇನ್ನಿತರ ಕಾಮಗಾರಿ ನಡೆಯುವ ಸ್ಥಳದಲ್ಲಿ ನಿಲ್ಲಿಸುವ ಟಿಪ್ಪರ್, ಜೆಸಿಬಿ ಮೊದಲಾದ ವಾಹನಗಳ ಬ್ಯಾಟರಿ ಹಾಗೂ ಇನ್ನಿತರ ಬಿಡಿಭಾಗ ಕಳವು ಮಾಡುವುದು ನಿತ್ಯ ನಡೆಯುತ್ತಲೇ ಇವೆ. ಆದರೆ ಈ ಸಂಬಂಧ ಪೊಲೀಸರು ಎಫ್‌ಐಆರ್ ದಾಖಲಿಸುತ್ತಿಲ್ಲ. ಕಳವು ಪ್ರಕರಣ ತಡೆಗೆ ಕ್ರಮ ಕೈಗೊಳ್ಳುತ್ತಿಲ್ಲ. ಇದೇ ಧೋರಣೆ ಮುಂದುವರಿದರೆ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಅರ್ಥ್ ಮೂರ?ಸ್ ಅಸೋಸಿಯೇಷನ್ ಸದಸ್ಯ ಜಗದೀಶ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇನ್ನಿತರ ಕಳವು ಪ್ರಕರಣಗಳ ವೇಳೆ ಎಫ್‌ಐಆರ್ ದಾಖಲಿಸಿಕೊಂಡು ಕಳ್ಳರ ಪತ್ತೆಗೆ ಕ್ರಮ ಕೈಗೊಳ್ಳುವ ಪೊಲೀಸರು ನಮ್ಮ ಬಗ್ಗೆ ಏಕೆ ನಿರ್ಲಕ್ಷ ?ಯ ತೋರುತ್ತಿದ್ದಾರೆ ಎಂಬುದು ಅರಿವಾಗದು. ನಿತ್ಯ ಎಲ್ಲಾದರೊಂದು ಕಡೆ ಈ ರೀತಿಯ ಕಳವು ನಡೆಯುತ್ತಿದೆ. ಆದರೂ ಪೊಲೀಸರು ಗಂಭೀರವಾಗಿ ಪರಿಗಣಿಸಿಲ್ಲ. ಡೀಸೆಲ್ ಸಹಾ ಕಳವು ಮಾಡಲಾಗುತ್ತಿದೆ. ಒಂದೊಂದು ವಾಹನದ ಬ್ಯಾಟರಿ ಕಳವಾದಾಗಲೂ ಮಾಲೀಕರಿಗೆ 15 ರಿಂದ 20 ಸಾವಿರ ನಷ್ಟವಾಗುತ್ತಿದೆ. ಹೀಗಾಗಿ ರಾತ್ರಿ ಗಸ್ತು ಹೆಚ್ಚಿಸಬೇಕು. ಈ ರೀತಿ ಕಳವು ಮಾಡಿದವು ಎಲ್ಲಿಗೆ ಹೋಗುತ್ತಿವೆ ಎಂಬುದನ್ನು ಪತ್ತೆ ಹಚ್ಚಬೇಕು. ಇಂತಹ ಪ್ರಕರಣಗಳಿಗೆ ಕಡಿವಾಣ ಹಾಕಬೇಕು. ಇಲ್ಲದಿದ್ದರೆ ಪ್ರತಿಭಟಿಸಲಾಗುವುದೆಂದು ಎಚ್ಚರಿಸಿದರು. ಇನ್ನಿತರ ಪದಾಧಿಕಾರಿಗಳಾದ ಮುರಳೀಧರ್, ಸುಬ್ರಹ್ಮಣ್ಯ, ವೆಂಕಟೇಶ್ ರೆಡ್ಡಿ ಇದ್ದರು.

ಅ.11ರಿಂದ ಧ್ಯಾನ ದಸರಾ

ಮೈಸೂರು: ಪಿರಮಿಡ್ ಸ್ಪಿರಿಚ್ಯುಯಲ್ ಸೊಸೈಟೀಸ್ ಮೂವ್‌ಮೆಂಟ್ ಮೈಸೂರು ವತಿಯಿಂದ ಅ. 11 ರಿಂದ 15 ರವರೆಗೆ ನಗರದ ದಿವಾನ್ಸ್ ರಸ್ತೆಯ ಆಲಮ್ಮನವರ ಛತ್ರದಲ್ಲಿ ಮೈಸೂರು ಧ್ಯಾನ ದಸರಾ ಆಯೋಜಿಸಲಾಗಿದೆ ಎಂದು ಸಂಸ್ಥೆಯ ಸದಸ್ಯ ನಟರಾಜ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಒಂದೊಂದೂ ದಿನ ಒಂದೊಂದು ವಿಷಯದ ಮೇಲೆ ಕಾರ್ಯಕ್ರಮ ನಡೆಯಲಿವೆ. ನಗರದಿಂದ ಮಾತ್ರವಲ್ಲದೆ, ಇನ್ನಿತರೆಡೆಗಳಿಂದಲೂ ಸುಮಾರು ಎರಡು ಸಾವಿರ ಮಂದಿ ಪಾಲ್ಗೊಳ್ಳುವ ಉಚಿತ ಶಿಬಿರ ಇದಾಗಿದೆ. ಅಲ್ಲದೆ, ನಿತ್ಯ ಬೆಳಗ್ಗೆ 5 ರಿಂದ 8 ರವರೆಗೆ ಧ್ಯಾನವಿರಲಿದೆ ಎಂದು ಮಾಹಿತಿ ನೀಡಿದರು. ಅನಿತಾ, ಸ್ವರ್ಣ ಕುಮಾರಿ ಇದ್ದರು.

ಅ.11ರಂದು ಬ್ರಹ್ಮಶ್ರೀ ನಾರಾಯಣಗುರು ಜಯಂತಿ

ಮೈಸೂರು: ನಗರದ ಶ್ರೀನಾರಾಯಣ ಧರ್ಮ ಪರಿಪಾಲನ ಯೋಗಂ (ಎಸ್‌ಎನ್‌ಡಿಪಿ) ಹಾಗೂ ಬ್ರಹ್ಮಶ್ರೀ ನಾರಾಯಣ ಗುರು ಮಿಷನ್ ಮತ್ತು ಚಾರಿಟಬಲ್ ಟ್ರಸ್ಟ್ ವತಿಯಿಂದ ಅ.11ರಂದು ನಗರದ ಜೆ.ಕೆ.ಗ್ರೌಂಡ್‌ನಲ್ಲಿರುವ ಮೈಸೂರು ವೈದ್ಯಕೀಯ ಕಾಲೇಜಿನ ಅಲುಮ್ನಿ ಸಭಾಂಗಣದಲ್ಲಿ ಬ್ರಹ್ಮಶ್ರೀ ನಾರಾಯಣ ಗುರುಗಳ 172ನೇ ಜಯಂತಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ ಎಂದು ಎಸ್‌ಎನ್‌ಡಿಪಿ ಅಧ್ಯಕ್ಷ ಜಿ.ರಾಜೇಂದ್ರನ್ ತಿಳಿಸಿದರು.

ನಗರದಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅ.11ರಂದು ಬೆಳಿಗ್ಗೆ 8ಕ್ಕೆ ಧ್ವಜಾರೋಹಣ, 8.30ರಿಂದ ಹೂವಿನ ರಂಗೋಲಿ ಹಾಗೂ ಚಿತ್ರಕಲಾ ಸ್ಪರ್ಧೆಯನ್ನು 8 ರಿಂದ 12 ವರ್ಷದೊಳಗಿನ ಮಕ್ಕಳಿಗೆ ಏರ್ಪಡಿಸಲಾಗಿದೆ. ನಂತರ ಬೆಳಿಗ್ಗೆ 11ಕ್ಕೆ ಸಭಾ ಕಾರ್ಯಕ್ರಮ ನಡೆಯಲಿದೆ ಎಂದು ಹೇಳಿದರು. ಕಾರ್ಯಕ್ರಮವನ್ನು ಸೋಲೂರಿನ ಈಡಿಗ ಮಹಾಸಂಸ್ಥಾನದ ಪೀಠಾಧ್ಯಕ್ಷ ಶ್ರೀ ವಿಖ್ಯಾತಾನಂದ ಸ್ವಾಮೀಜಿ ಉದ್ಘಾಟಿಸಲಿದ್ದಾರೆ. ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕಿ ಪಿ.ವಿ.ಉಷಾ ಕುಮಾರಿ, ಶಾಸಕರಾದ ಕೆ.ಹರೀಶ್ ಗೌಡ, ಟಿ.ಎಸ್.ಶ್ರೀವತ್ಸ ಸೇರಿ ಈಡಿಗ, ಆರ್ಯ ಈಡಿಗ, ಬಿಲ್ಲವ ಸಂಘಗಳ ಅಧ್ಯಕ್ಷರುಗಳು ಮುಖ್ಯಅತಿಥಿಗಳಾಗಿ ಆಗಮಿಸಲಿದ್ದಾರೆ. ಇದೇ ಸಂದರ್ಭದಲ್ಲಿ 'ಶ್ರೀ ನಾರಾಯಣ ಗುರು ಮತ್ತು ತೆಲ್ಲಿಚೆರಿ ಶ್ರೀ ಜಗನ್ನಾಥ ದೇವಾಲಯ' ವಿಷಯ ಕುರಿತು ತೆಲ್ಲಿಚೆರಿ ಶ್ರೀ ಜಗನ್ನಾಥ ದೇವಾಲಯದ ಅಧ್ಯಕ್ಷ ಕೆ.ಸತ್ಯನ್ ಅವರು ಉಪನ್ಯಾಸ ನೀಡಲಿದ್ದಾರೆ ಎಂದರು. ತಳ ಸಮುದಾಯದ ಸಾಧಕರಿಗೆ ಸನ್ಮಾನ, ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಹೆಚ್ಚಿನ ಅಂಕ ಗಳಿಸಿದ ಸಮುದಾಯದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಸುಮಾರು 1500 ಜನ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ ಎಂದರು. ಮುಖಂಡರಾದ ಸಂತೋಷ್ ರಾಮ್, ಆನಂದ್, ವಿಜಯಮ್ಮ ಪ್ರಕಾಶ್, ಸೂರ್ಯನಾರಾಯಣ್, ವಿಜಯ ಕುಮಾರ್ ಸುದ್ದಿಗೋಷ್ಠಿಯಲ್ಲಿ ಹಾಜರಿದ್ದರು.

ಬುಡಕಟ್ಟು ಮಕ್ಕಳಿಗೆ ಸಫಾರಿ, ರಾಮಪುರದಲ್ಲಿ ಆನೆಗಳಿಗೆ ಪೂಜೆ

ವನ್ಯಜೀವಿ ಸಪ್ತಾಹ ಹಾಗೂ ವನ್ಯಜೀವಿ ಜಾಗೃತಿ

ಗುಂಡ್ಲುಪೇಟೆ: ವನ್ಯಜೀವಿ ಸಪ್ತಾಹ?2026ರ ಅಂಗವಾಗಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಬುಧವಾರ 6ನೇ ದಿನದ ವನ್ಯಜೀವಿ ಜಾಗೃತಿ, ಸಮುದಾಯದ ಭಾಗವಹಿಸುವಿಕೆ, ಆನೆಗಳ ಸಂರಕ್ಷಣೆ ಹಾಗೂ ಮುಂಚೂಣಿ ಅರಣ್ಯ ಸಿಬ್ಬಂದಿಯ ಕಲ್ಯಾಣಕ್ಕೆ ಒತ್ತು ನೀಡಿ ಆಚರಿಸಲಾಯಿತು.

ಸ್ವಯಂಪ್ರೇರಿತವಾಗಿ ಪುನರ್ವಸತಿ ಹೊಂದಿರುವ ಬುಡಕಟ್ಟು ಸಮುದಾಯಗಳ ಸದಸ್ಯರು ಮತ್ತು ಮಕ್ಕಳಿಗಾಗಿ ಬೆಳಿಗ್ಗೆ ಸಂಕ್ಷಿಪ್ತ ಸಫಾರಿಯನ್ನು ಅಳವಡಿಸಲಾಗಿದೆ. ಈ ಸಫಾರಿ ವೇಳೆ ಮಕ್ಕಳು ಹಾಗೂ ಸಮುದಾಯದ ಸದಸ್ಯರು ಬಂಡೀಪುರದ ಅರಣ್ಯ, ನೈಸರ್ಗಿಕ ಪರಿಸರ ಹಾಗೂ ವನ್ಯಜೀವಿಗಳನ್ನು ನೇರವಾಗಿ ವೀಕ್ಷಿಸುತ್ತಾರೆ ಅಪೂರ್ವ ಅವಕಾಶವನ್ನು ಪಡೆದರು. ಬಳಿಕ ನಡೆದ ವನ್ಯಜೀವಿ ಜಾಗೃತಿ ಕಾರ್ಯಕ್ರಮದಲ್ಲಿ ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಯ ಮಹತ್ವ, ಪ್ರಕೃತಿ ರಕ್ಷಣೆ ಹಾಗೂ ಪರಿಸರದೊಂದಿಗೆ ಸಾಮರಸ್ಯದಿಂದ ಬದುಕುವ ಅಗತ್ಯದ ಕುರಿತು ಅರಿವು ಮೂಡಿಸಲಾಯಿತು. ಇದೇ ವೇಳೆ ಭಾಗವಹಿಸಿದ್ದವರಿಗೆ ಉಪಹಾರದ ವ್ಯವಸ್ಥೆ ಸಹ ಮಾಡಲಾಗಿತ್ತು.

ಈ ಅರ್ಥಪೂರ್ಣ ಕಾರ್ಯಕ್ರಮದಲ್ಲಿ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಪ್ರಭಾರ ಕ್ಷೇತ್ರ ನಿರ್ದೇಶಕರಾದ ಶುಭ ಸಿಂಗ್ ತನ್ವರ್, ಐಎಫ್‌ಎಸ್ (ಐಎಫ್‌ಎಸ್), ಎಸಿಎಫ್ (ಎಸಿಎಫ್) ಪರಮೇಶ್, ಪ್ರೊಬೇಷನರಿ ಎಸ್ಸಿಎಫ್ ವಿನೋದ್ ಸೇರಿದಂತೆ ವಿವಿಧ ವಲಯಗಳ ವಲಯ ಅರಣ್ಯಾಧಿಕಾರಿಗಳು ಹಾಗೂ ಅರಣ್ಯ ಇಲಾಖೆ ಸಿಬ್ಬಂದಿ ವರ್ಗದವರು.

ರಾಮಪುರದಲ್ಲಿ ಆನೆಗಳಿಗೆ ಪೂಜೆ

ವನ್ಯಜೀವಿ ಸಪ್ತಾಹದ ಅಂಗವಾಗಿ ರಾಮಪುರ ಆನೆ ಶಿಬಿರದಲ್ಲಿ ಆನೆ ಪೂಜೆ ಕಾರ್ಯಕ್ರಮವೂ ಅತ್ಯಂತ ಶ್ರದ್ಧಾಭಕ್ತಿಯಿಂದ ನಡೆಯಿತು. ಅರಣ್ಯ ನಿರ್ವಹಣೆ ಹಾಗೂ ವನ್ಯಜೀವಿ ಸಂರಕ್ಷಣಾ ಕಾರ್ಯಗಳಲ್ಲಿ ಆನೆಗಳ ಮಹತ್ವವನ್ನು ಗೌರವಿಸುವ ಉದ್ದೇಶದಿಂದ ಈ ವಿಶೇಷ ಕಾರ್ಯಕ್ರಮ ಅಳವಡಿಸಲಾಗಿದೆ. ಈ ಕಾರ್ಯಕ್ರಮದಲ್ಲಿ ಒಟ್ಟು 19 ಆನೆಗಳು ಹಾಗೂ 36 ಮಾವುತರು ಮತ್ತು ಕಾವಾಡಿಗಳು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಸಿಬ್ಬಂದಿ ಕಲ್ಯಾಣ ಕಾರ್ಯಕ್ರಮದ ಅಂಗವಾಗಿ ಮಾವುತರು ಮತ್ತು ಕಾವಾಡಿಗಳಿಗೆ ಶೂ ಹಾಗೂ ಸಮವಸ್ತ್ರಗಳನ್ನು ವಿತರಿಸಲಾಯಿತು.

ಅ.11 ರಿಂದ ಲಲಿತಕಲೆ ಮತ್ತು ಕರಕುಶಲ ಕಲೆ

ಮೈಸೂರು: ಮೈಸೂರು ದಸರಾ ಮಹೋತ್ಸವ 2026 ಹಿನ್ನೆಲೆ ಲಲಿತಕಲೆ ಮತ್ತು ಕರಕುಶಲ ಕಲೆ ಉಪಸಮಿತಿ ವತಿಯಿಂದ ಅ.11 ರಿಂದ ಅ.14 ರವರೆಗೆ ಲಲಿತಕಲೆ ಮತ್ತು ಕರಕುಶಲ ಕಲೆ ಉಪ ಸಮಿತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

ಅ.11ರಂದು ಸಂಜೆ 4.30ಕ್ಕೆ ಸಿದ್ಧಾರ್ಥನಗರದ ಚಾಮರಾಜೇಂದ್ರ ದೃಶ್ಯಕಲಾ ಕಾಲೇಜು(ಕಾವಾ)ನಲ್ಲಿ ಲಲಿತಕಲೆ ಮತ್ತು ಕರಕುಶಲ ಕಲೆ ಕಾರ್ಯಕ್ರಮಗಳ ಉದ್ಘಾಟನೆಯನ್ನು ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವ ಶಿವರಾಜ ತಂಗಡಗಿ ನೆರವೇರಿಸಲಿದ್ದು, ಶಾಸಕ ತನ್ವೀರ್ ಸೇಠ್ ಅಧ್ಯಕ್ಷತೆವಹಿಸಲಿದ್ದಾರೆ. ಉದ್ಘಾಟನಾ ಕಾರ್ಯಕ್ರಮದ ಬಳಿಕ ಸ್ಯಾಂಡ್ ಕ್ಯಾಸ್ಟಿಂಗ್, ಕಾವಿಕಲೆ ಮತ್ತು ಅಚ್ಚುಕಲೆ ಶಿಬಿರಗಳಲ್ಲಿ ರಚಿತ ಗೊಂಡ ಕಲಾಕೃತಿಗಳ ಅನಾವರಣ, ರಾಜ್ಯಮಟ್ಟದ ಕಲಾವಿದರಿಂದ ಆಹ್ವಾನಿತ ಕಲಾಕೃತಿಗಳ ಪ್ರದರ್ಶನ, ರಾಷ್ಟ್ರ ಮತ್ತು ರಾಜ್ಯ ಕಲೆಗಳ ಕಲಾಕೃತಿಗಳ ಪ್ರದರ್ಶನ ಪ್ರಾತ್ಯಕ್ಷಿಕೆ ಮತ್ತು ಮಾರಾಟ, ಕಲಾತ್ಮಕ ಅನಿಮೇಷನ್ ಕಿರುಚಿತ್ರ ಪ್ರದರ್ಶನ ಏರ್ಪಡಿಸಲಾಗಿದೆ.

ಅ.11 ರಿಂದ ಪ್ರತಿದಿನ ಬೆಳಗ್ಗೆ 10.30 ರಿಂದ ಸಂಜೆ 5 ಗಂಟೆಯವರೆಗೆ ವಿವಿಧ ಕಲಾಪ್ರಕಾರಗಳ ಪ್ರಾತ್ಯಕ್ಷಿಕೆ ವಿಶೇಷ ಆಕರ್ಷಣೆಯಾಗಲಿದೆ. ಅ.12 ರಿಂದ 14ರವರೆಗೆ ಬೆಳಗ್ಗೆ 12 ರಿಂದ 1 ಹಾಗೂ ಮ.2 ರಿಂದ 4ಗಂಟೆಯವರೆಗೆ ಕಲಾತ್ಮಕ ಅನಿಮೇಷನ್ ಕಿರುಚಿತ್ರ ಪ್ರದರ್ಶನವಿರಲಿದೆ. ಅ.13 ರಂದ ಮ.2 ರಿಂದ 5 ಗಂಟೆಯವರೆಗೆ 1 ರಿಂದ 4 ಮತ್ತು 9 ರಿಂದ 12ನೇ ತರಗತಿಯ ಶಾಲಾ ಕಾಲೇಜು ವಿದ್ಯಾರ್ಥಿಗಳಿಗೆ ಸ್ಥಳದಲ್ಲಿ ಚಿತ್ರ ಬಿಡಿಸುವ ಸ್ಪರ್ಧೆ ಏರ್ಪಡಿಸಲಾಗಿದೆ. ಮ.2 ರಿಂದ 5ರವರೆಗೆ 5 ರಿಂದ 8ನೇ ತರಗತಿಯ ಶಾಲಾ ವಿದ್ಯಾರ್ಥಿಗಳಿಗೆ ಜೇಡಿಮಣ್ಣಿನ ಕಲಾಕೃತಿ ರಚಿಸುವ ಸ್ಪರ್ಧೆಯನ್ನು ಆಯೋಜಿಸಲಾಗಿದೆ. ಅ.14ರಂದು ಶಾಸಕ ತನ್ವೀರ್ ಸೇಠ್ ರಿಂದ ವಿತೇತರಿಗೆ ಗೌರವ ಸಮರ್ಪಣೆ ಹಾಗೂ ಬಹುಮಾನ ವಿತರಣೆ ಹಮ್ಮಿಕೊಳ್ಳಲಾಗಿದೆ. ಅ.18 ರಂದು ಕಾವಾ ಹಿರಿಯ ವಿದ್ಯಾರ್ಥಿಗಳ ಸಂಘದ ಸಹಯೋಗದಲ್ಲಿ ಬೆಳಗ್ಗೆ 9 ರಿಂದ ಸಂಜೆ 7ರವರೆಗೆ ಕಾಲಾ ಜಾತ್ರೆ ನಡೆಯಲಿದ್ದು, ಅ.11 ರಿಂದ 14ರವರೆಗೆ ಪ್ರತಿದಿನ ಸಂಜೆ 4 ರಿಂದ 6ವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ ಎಂದು ತಿಳಿಸಿದ್ದಾರೆ.

3 ತಿಂಗಳ ಉಚಿತ ಕೌಶಲ ತರಬೇತಿ

ಮೈಸೂರು: ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿವಿ ಹಾಗೂ

ಎಚ್‌ಡಿಕೆ ವಿರುದ್ಧ ಮಾಜಿ ಶಾಸಕ ಕೆ.ರಾಜು ಕಿಡಿ

ಬೆಂಗಳೂರು ಸುತ್ತಾಮುತ್ತ ಎಚ್‌ಡಿಕೆ 700 ಎಕರೆ ಭೂಮಿ । ಅವರನ್ನು ನಂಬಿದ ಕಾರ್ಯಕರ್ತರು ಸಾಲಗಾರರಾಗಿದ್ದಾರೆ

ರಾಮನಗರ: ಅಪಾರ ಪ್ರಮಾಣದ ಭೂಮಿ ಖರೀದಿ ಸಿದ್ದಾರೆ ಎಂದು ಡಿ.ಕೆ.ಶಿವಕುಮಾರ್ ವಿರುದ್ಧ ಆರೋಪ ಮಾಡಿರುವ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಬೆಂಗಳೂರು ಸುತ್ತಮುತ್ತ 700 ಎಕರೆ ಭೂಮಿ ಖರೀದಿಸಿದ್ದಾರೆ ಎಂದು ಗೊತ್ತಾಗಿದೆ ಎಂದು ರಾಮನಗರ ಕ್ಷೇತ್ರದ ಮಾಜಿ ಶಾಸಕ ಹಾಲಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಕೆ.ರಾಜು ತಿರುಗೇಟು ಕೊಟ್ಟಿದ್ದಾರೆ.

ನಗರದಲ್ಲಿರುವ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ

ಗ್ರಾಪಂ, ತಾಪಂ, ಜಿಪಂ ಸ್ಪರ್ಧಿಸದ ಎಚ್‌ಡಿಕೆ

ಒಮ್ಮೆಯೂ ಗ್ರಾಮಪಂಚಾಯ್ತಿ, ತಾಲ್ಲೂಕು ಪಂಚಾಯ್ತಿ, ಜಿಲ್ಲಾ ಪಂಚಾಯ್ತಿ ಸದಸ್ಯರಾಗದೇ ಕುಮಾರಸ್ವಾಮಿ ಅವರು ಮುಖ್ಯಮಂತ್ರಿಗಳಾದರು. ಡಿ.ಕೆ.ಶಿವಕುಮಾರ್ ರಾಜಕೀಯದ ತಳಹದಿಯಿಂದ ಬಂದು ಇಂದು ಮುಖ್ಯಮಂತ್ರಿಗಳಾಗಿದ್ದಾರೆ. ಡಿ.ಕೆ.ಶಿವಕುಮಾರ್ ಮತ್ತು ಡಿ.ಕೆ.ಸುರೇಶ್ ಅವರ ರಾಜಕೀಯ ಸ್ಪೀಡ್ ತಡೆಯಲಾಗದೆ ಅವರ ವಿರುದ್ಧ ಕುಮಾರಸ್ವಾಮಿ ಹಗುರವಾಗಿ ಮಾತನಾಡುತ್ತಿದ್ದಾರೆ. ಡಿಕೆಶಿ ಅವರ ತೇಜೋವಧೆಗೆ ಮುಂದಾಗಿದ್ದಾರೆ ಎಂದರು.

ಡಿಕೆಶಿ ಜೈಲಿಗೆ ಹೋಗಲು ಎಚ್‌ಡಿಡಿ ಕುಟುಂಬ ಕಾರಣ

1983ರಿಂದಲೇ ಡಿ.ಕೆ.ಶಿವಕುಮಾರ್ ಅವರು ಉದ್ಯಮ ನಡೆಸುತ್ತಿದ್ದಾರೆ. ಹಣ, ಆಸ್ತಿ ವಿಚಾರವನ್ನು ಐಟಿ ಸೇರಿದಂತೆ ಸಂಬಂಧಿಸಿದ ಇಲಾಖೆಗಳ ಗಮನಕ್ಕೆ ತರಬೇಕು ಎಂಬ ಪರಿಜ್ಞಾನ ಡಿ.ಕೆ.ಶಿವಕುಮಾರ್ ಅವರಿಗಿದೆ. ಡಿಕೆಶಿ ಅವರು ಜೈಲಿಗೆ ಹೋಗಲು ಸಹ ದೇವೇಗೌಡರ ಕುಟುಂಬವೇ ಕಾರಣ ಎಂದು ಆರೋಪಿಸಿದರು.

ರೈತರ ಸಮಾಧಿ ಮೇಲೆ ರಾಜಕೀಯ ಸೌಧ!

ಚನ್ನಪಟ್ಟಣದ ಎತಲೇನಹಳ್ಳಿ ನೀರಾ ಚಳವಳಿ ವಿರುದ್ಧ ನಡೆದ ಗೋಲಿಬಾರ್ ಪ್ರಕರಣದಲ್ಲಿ ಇಬ್ಬರು ರೈತರು ಮೃತಪಟ್ಟಿದ್ದಾರೆ. ಮೃತರ ಸಮಾಧಿ ಮೇಲೆ ಹೆಚ್.ಡಿ.ದೇವೇಗೌಡ ಕುಟುಂಬ ರಾಜಕೀಯ ಸೌಧ ಕಟ್ಟಿಕೊಂಡಿದ್ದಾರೆ. ದೇವೇಗೌಡರು ತಮ್ಮ 30 ವರ್ಷದ ರಾಜಕೀಯದ ನಂತರ ಮುಖ್ಯಮಂತ್ರಿಗಳಾ ದರು. ಆದರೆ ಕುಮಾರ ಸ್ವಾಮಿ ಅಪ್ಪನನ್ನು ಮೀರಿದ ಅವರಿಗೆ ಅಧಿಕಾರ ಬೇಕಾಗಿತ್ತು. ಧರಂಸಿಂಗ್ ಅವರ ಬೆನ್ನಿಗೆ ಚೂರಿ ಹಾಕಿ ಕುಮಾರ ಸ್ವಾಮಿ ಮುಖ್ಯಮಂತ್ರಿಗಳಾಗಿದ್ದರು ಎಂದು ಹರಿಹಾಯ್ದರು.

ಜೆಡಿಎಸ್ ಕಾರ್ಯಕರ್ತರು ಹೆಲಿಕಾಪ್ಟರ್‌ನಲ್ಲಿ ಓಡಾಡಾರ?

ಕನಕಪುರ ರಾಜಕೀಯದಲ್ಲಿ ಡಿ.ಕೆ.ಶಿವಕುಮಾರ್ ಮತ್ತು ಪಿಜಿಆರ್ ಸಿಂಧ್ಯ ಪ್ರಮುಖರು. ಅವರಿಬ್ಬರನ್ನು ಕುರಿತು ಕುಮಾರಸ್ವಾಮಿ ಒಮ್ಮೆ ಇವರನ್ನು ನಂಬಿದ ಕಾರ್ಯಕರ್ತರೆಲ್ಲ ಬಿಕ್ಷೆ ಬೇಡುವ ಸ್ಥಿತಿಯಲ್ಲಿದ್ದಾರೆ ಎಂದು ಟೀಕಿಸಿದ್ದರು. ಜೆಡಿಎಸ್‌ನಲ್ಲಿ ಇವರನ್ನು ನಂಬಿರುವ ಕಾರ್ಯಕರ್ತರು ಹೆಲಿಕಾಪ್ಟರ್‌ನಲ್ಲಿ ಓಡಾಡುತ್ತಿದ್ದಾರ ಎಂದು ಪ್ರಶ್ನಿಸಿದರು.

ಅವರಿಗೆ ಮೈಯಲ್ಲ ವಿಷ!

ಕುಮಾರಸ್ವಾಮಿ ಅವರ ಮೈಯಲ್ಲ ವಿಷ. ಮಾತಿನಲ್ಲಿ ಮಾತ್ರ ಇಲ್ಲ. ಅವರೊಬ್ಬ ವಚನಭ್ರಷ್ಟ ಹೊಲಸು ಮಾತನಾಡಿದ ನಂತರ ಬಿ.ಎಸ್.ಯಡಿಯೂರಪ್ಪ ಅವರ ಜೊತೆ ಸೇರಿದರು. ವಾಸ್ತವದಲ್ಲಿ ರಾಜ್ಯದಲ್ಲಿ ಬಿಜೆಪಿ ನೆಲ ಊರಲು ಕುಮಾರಸ್ವಾಮಿ ಅವರೇ ಕಾರಣ ಎಂದರು.

ನಡೆದ ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು. ಮೈಸೂರಿನಲ್ಲಿಯೂ ಕುಮಾರಸ್ವಾಮಿ ಅವರು 200*300 ಅಳತೆಯ ಭೂಮಿಯನ್ನು ಬಹಳ ಹಿಂದೆಯೇ ಖರೀದಿಸಿದ್ದಾರೆ ಎಂಬ ಮಾಹಿತಿ ಇದೆ. ನಿಖಿಲ್ ಕುಮಾರಸ್ವಾಮಿ ಅವರ ಹೆಸರಿನಲ್ಲಿಯೂ ಆಸ್ತಿ ಇದೆ ಎಂದು ಗೊತ್ತಾಗಿದೆ ಎಂದರು. ರಾಜಕೀಯಕ್ಕೆ ಬರುವ ಮುನ್ನವೇ ಕುಮಾರಸ್ವಾಮಿ ಅವರಿಗೆ ಭೂಮಿ, ಆಸ್ತಿ ಮಾಡುವುದು ಕರಗತವಾಗಿತ್ತು. ರಾಧಿಕಾ ಕುಮಾರಸ್ವಾಮಿ ಅವರೊಂದಿಗೆ ಸಂಬಂಧ ಕಡಿದುಕೊಳ್ಳಲು ನೂರಾರು ಕೋಟಿ ಕೊಟ್ಟಿದ್ದಾರೆ. ಇದೆಲ್ಲ ಹೇಗೆ ಸಾಧ್ಯವಾಗಿದೆ ಎಂದು ಪ್ರಶ್ನಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಕಾಂಗ್ರೆಸ್ ಜಿಲ್ಲಾಧ್ಯಕ್ಷ ಸಿಎನ್ ಆರ್ ವೆಂಕಟೇಶ್, ರಾಮನಗರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಎ.ಬಿ.ಚೇತನ್ ಕುಮಾರ್, ನಗರಸಭೆ ಸದಸ್ಯರಾದ ಅಜ್ಮತ್, ನಿಜಾಂ, ಪಾರ್ವತಮ್ಮ, ಆಯಿಷಾ ಬಾನು, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿ. ಎಚ್. ರಾಜು, ಪ್ರಮುಖರಾದ ಅರೇಹಳ್ಳಿ ಗಂಗಾಧರ್ ಗೌಡ, ಜಯಣ್ಣ, ಕೆ.ರಮೇಶ್, ಪರ್ವೇಜ್ ಪಾಷ, ಪುಟ್ಟಣ್ಣ, ಜಯರಾಂ, ಬೈರೇಗೌಡ, ನರಸಿಂಹಯ್ಯ (ಟೌನ್ ಎಂ.ಎಲ್.ಎ) ಪ್ರಾಣೇಶ್ ಮುಂತಾದವರು ಹಾಜರಿದ್ದರು.

ಎಚ್‌ಡಿಕೆ ಶ್ರೀಮಂತರಾದರು, ಕಾರ್ಯಕರ್ತರು ಸಾಲಗಾರರಾದರು

ರಾಮನಗರದಲ್ಲಿ ರಾಜಕೀಯ ಮರುಜನ್ಮ ಪಡೆದ ದೇವೇಗೌಡರು ಮುಂದೆ ಮುಖ್ಯಮಂತ್ರಿಗಳಾದರು, ಪ್ರಧಾನಿಗಳು ಆದರು. ಇತ್ತ ಕುಮಾರಸ್ವಾಮಿ ಡಿ.ಕೆ.ಶಿವಕುಮಾರ್ ವಿರುದ್ಧ ಹೀನಾಯವಾಗಿ ಸೋಲುಂಡಿದ್ದರು. ನಾನು ಜೆಡಿಎಸ್‌ನಲ್ಲಿ ಇದ್ದಾಗ, ಜೆಡಿಎಸ್ ಮುಖಂಡರೆಲ್ಲ ಸೇರಿ ಕುಮಾರಸ್ವಾಮಿ ಅವರ ಮನವೊಲಿಸಿ ಸಿ.ಎಂ.ಲಿಂಗಪ್ಪ ಅವರನ್ನು ಸೋಲಿಸಲು ರಾಮನಗರಕ್ಕೆ ಕರೆತಂದೆವು. ಕುಮಾರಸ್ವಾಮಿ ಶ್ರೀಮಂತರಾದರು, ಅವರನ್ನು ನಂಬಿದ ನಾವೆಲ್ಲ ಸಾಲಗಾರರಾಗಿದ್ದೇವೆ. ರಾಮನಗರವನ್ನು ನಮ್ಮ ಕರ್ಮ ಭೂಮಿ ಎನ್ನುತ್ತಾರೆ. ಇಲ್ಲೇ ಮಣ್ಣಾಗುತ್ತೇನೆ ಅಂದಿದ್ದಾರೆ. ಕರ್ಮಭೂಮಿ ಬಿಟ್ಟು ಅವರು ಚಿಕ್ಕಬಳ್ಳಾಪುರದಿಂದ ಸ್ಪರ್ಧಿಸಿದರು. ಮತ್ತೆ ವಾಪಸ್ಸು ಬಂದರು. ಆಗ ನಾವ್ಯಾರು ಇದನ್ನು ಪ್ರಶ್ನಿಸಲಿಲ್ಲ. ನಂತರ ಅವರು ಚನ್ನಪಟ್ಟಣದಿಂದ ಸ್ಪರ್ಧಿಸಿ ಮುಖ್ಯಮಂತ್ರಿಗಳಾದರು. ಆಗಲೂ ನಾವ್ಯಾರು ಅವರನ್ನು ಪ್ರಶ್ನಿಸಲಿಲ್ಲ ಎಂದರು. ತಾವು ಜೆಡಿಎಸ್‌ನಲ್ಲಿದ್ದಾಗ, ರಾಮನಗರ ಕ್ಷೇತ್ರದ ಶಾಸಕರಾಗಿದ್ದಾಗಿ, ಅಲ್ಲಿಯವರೆಗೆ ತಾವು ಆರ್ಥಿಕವಾಗಿ ಸಲಬರಾಗಿದ್ದಾಗಿ, ತದನಂತರ ಸಾಲಗಾರನಾಗಿ 12 ನಿವೇಶನಗಳು ಮತ್ತು 18 ಎಕರೆ ಜಮೀನು ಮಾರಿದ್ದಾಗಿ ತಿಳಿಸಿದರು. ಇಂದು ಅದೇ ಭೂಮಿಯ ಬೆಲೆ 35 ರಿಮದ 40 ಕೋಟಿ ರೂ ಆಗುತ್ತದೆ ಎಂದು ತಮಗಾದ ನಷ್ಟದ ಬಗ್ಗೆ ಮಾತನಾಡಿದರು. ಜೆಡಿಎಸ್ ಪಕ್ಷ ಕಟ್ಟಲು ಹಾಗೂ ಕುಮಾರಸ್ವಾಮಿ ಅವರ ರಾಜಕೀಯದ ಏಳಿಗೆಗಾಗಿ ತಾವೆಲ್ಲ ಸಾಲಗಾರರಾಗಿದ್ದಾಗಿ ಬೇಸರ ವ್ಯಕ್ತಪಡಿಸಿದರು.

ಪ್ರಧಾನಿ ಮಗ ಮಾಡದ್ದ ಸಾಧನೆ, ಮೇಷ್ಟ್ರು ಮಗ ಮಾಡಿದ್ದಾರೆ

ತಾವು ರೈತರಿಗಾಗಿ ರಾಜಕೀಯದಲ್ಲಿರುವುದಾಗಿ ಕುಮಾರಸ್ವಾಮಿ ಪದೇ ಪದೇ ಹೇಳಿದ್ದಾರೆ. ಆದರೆ ಒಂದೇ ಒಂದು ನೀರಾವರಿ ಯೋಜನೆಯನ್ನು ತಮ್ಮ ಕ್ಷೇತ್ರದಲ್ಲಿ ಮಾಡಲಿಲ್ಲ. ಪ್ರಧಾನಿ ಮಗ ಮಾಡದ್ದನ್ನು ಮೇಷ್ಟ್ರು ಮಗ ಸಿ.ಪಿ.ಯೋಗೇಶ್ವರ್ ಚನ್ನಪಟ್ಟಣದಲ್ಲಿ ಕೆರೆಗಳನ್ನು ತುಂಬಿಸುವ ಯೋಜನೆಗಳನ್ನು ರೂಪಿಸಿದರು ಎಂದು ವಾಗ್ದಾಳಿ ನಡೆಸಿದರು.

ದುಡ್ಡು ಹೊಡೆಯೋಕಾ ಅಂತ ಪ್ರಶ್ನೆ ಮಾಡಿದ್ದರು!

ತಮ್ಮ ಜೀವನ ತೆರೆದ ಪುಸ್ತಕ ಎನ್ನುತ್ತಾರೆ. ಅವರು ಹಲವಾರು ವಿಚಾರಗಳಲ್ಲಿ ಪಿ.ಎಚ್.ಡಿ ಮಾಡಿದ್ದಾರೆ. ರಾಜಕಾರಣಿಗಳಲ್ಲಿ ಇರಬಾರದೆಲ್ಲಾ ಗುಣಗಳು ಕುಮಾರಸ್ವಾಮಿ ಅವರಲ್ಲಿದೆ ಎಂದು ಟೀಕಾ ಪ್ರಹಾರ ನಡೆಸಿದರು. ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ. ಚೆಲುವರಾಯಸ್ವಾಮಿ ಅವರು ಎಚ್.ಸಿ.ಬಾಲಕೃಷ್ಣ ಅವರಿಗೆ ಬೋರ್ಡ್‌ವೊಂದರ ಚೇರ್ಮನ್ ಮಾಡಿ ಎಂದು ಮನವಿ ಮಾಡಿದರು. ಆಗ ಕುಮಾರಸ್ವಾಮಿ ಅವರು ಏಕೆ ದುಡು ಮಾಡಲಿಕ್ಕ ಎಂದು ಪ್ರಶ್ನಿಸಿದರು. ಕುಮಾರಸ್ವಾಮಿ ಅವರ ರಾಜಕೀಯ ಏಳಿಗೆಗಾಗಿ ಶ್ರಮಿಸಿದವರ ಬಗ್ಗೆ ಅವರಿಗಿರುವ ಕಾಳಜಿ ಇದರಿಂದ ವ್ಯಕ್ತವಾಗುತ್ತದೆ ಎಂದರು.

ಸಿಹೆಚ್‌ಓಗಳ ಮೇಲೆ ಕ್ರಮಕ್ಕೆ ಆಗ್ರಹ

ಇಲಾಖೆಯ ಪ್ರಧಾನಕಾರ್ಯದರ್ಶಿ ರೋಹಿಕ್ ರಂಜನಂಪಾಂಡೆಗೆ ಮನವಿ



ಚಾಮರಾಜನಗರ : ಆರೋಗ್ಯ ನಿರೀಕ್ಷಣಾ ಅಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿಗಳ ವಿರುದ್ಧ ಅವಹೇಳಕಾರಿ ಹೇಳಿಕೆ ನೀಡಿರುವ ಸಮುದಾಯ ಆರೋಗ್ಯ ಅಧಿಕಾರಿಗಳ ಮೇಲೆ ಕ್ರಮಕೈಗೊಳ್ಳುವಂತೆ ಒತ್ತಾಯಿಸಿ ಆರೋಗ್ಯ ನಿರೀಕ್ಷಣಾಧಿಕಾರಿಗಳ ಸಂಘ, ಪ್ರಾಥಮಿಕ ಆರೋಗ್ಯ ಸುರಕ್ಷತ ಅಧಿಕಾರಿಗಳ ಸಂಘದ ಪದಾಧಿಕಾರಿಗಳು ನಗರದ ಜಿಲ್ಲಾಡಳಿತ ಭವನದ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣಾಧಿಕಾರಿಗಳ ಸಭಾಂಗಣದಲ್ಲಿ ಪ್ರಭಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ರಾಜೇಶ್‌ಕುಮಾರ್ ಹಾಗೂ ಜಿಲ್ಲಾ ಸರ್ವೇಕ್ಷಣಾಧಿ ಕಾರಿ ಡಾ.ಸುಂದರೇಶ್ ಅವರ ಮುಖಾಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತ್ವಿಕ್‌ರಂಜನಂಪಾಂಡೆಗೆ ಅವರಿಗೆ ಮನವಿ ಸಲ್ಲಿಸಲಾಯಿತು.

ಸಮುದಾಯ ಆರೋಗ್ಯ ಅಧಿಕಾರಿಗಳು ತಮ್ಮ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನವನದಲ್ಲಿ ನಡೆಯುತ್ತಿರುವ ಮುಷ್ಕರದಲ್ಲಿ ಸಮುದಾಯ ಆರೋಗ್ಯ ಅಧಿಕಾರಿಗಳು ಆರೋಗ್ಯ ನಿರೀಕ್ಷಣಾಧಿ ಕಾರಿಗಳು ಮತ್ತು ಪ್ರಾಥಮಿಕ ಆರೋಗ್ಯ ಸುರಕ್ಷತ ಅಧಿಕಾರಿಗಳ ವಿರುದ್ಧ ಅವಹೇಳಕಾರಿ ಹೇಳಿಕೆ ನೀಡಿರುವುದು ಅತ್ಯಂತ ಖಂಡನೀಯ ಕೂಡಲೇ ಅವರ ಮೇಲೆ ಕಾನೂನು ಕ್ರಮಕೈಗೊಳ್ಳಬೇಕು ಎಂದು ಪ್ರಭಾರ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ ಡಾ.ರಾಜೇಶ್‌ಕುಮಾರ್ ಹಾಗೂ ಜಿಲ್ಲಾ ಸರ್ವೇಕ್ಷ ಣಾಧಿ ಕಾರಿ ಡಾ.ಸುಂದರೇಶ್ ಅವರ ಮುಖಾಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಧಾನ ಕಾರ್ಯದರ್ಶಿ ಅವರಿಗೆ ಸಲ್ಲಿಸಿರುವ ಮನವಿಯಲ್ಲಿ ಆರೋಗ್ಯ ನಿರೀಕ್ಷಣಾ ಅಧಿಕಾರಿಗಳ ಸಂಘ, ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿಗಳ ಸಂಘದ ಪದಾಧಿಕಾರಿಗಳು ಒತ್ತಾಯಿಸಿದ್ದಾರೆ.ಈ ಸಂದರ್ಭದಲ್ಲಿ ಆರೋಗ್ಯ ನಿರೀಕ್ಷಣಾ ಅಧಿಕಾರಿಗಳ ಸಂಘ ಅಧ್ಯಕ್ಷ ಸ್ವಾಮಿ, ಪ್ರಧಾನ ಕಾರ್ಯದರ್ಶಿ ನಾರಾಯಣಸ್ವಾಮಿ, ಖಜಾಂಚಿ ಲೋಕೇಶ್, ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಗಳ ಸಂಘದ ಅಧ್ಯಕ್ಷೆ ಮಮತ, ಪ್ರಧಾನ ಕಾರ್ಯದರ್ಶಿ ಭಾಗ್ಯ, ಖಜಾಂಚಿ ಲತಾ ಹಾಗೂ ಜಿಲ್ಲೆಯ ಎಲ್ಲ ಹಿರಿಯ ಆರೋಗ್ಯ ನಿರೀಕ್ಷಣಾ ಅಧಿಕಾರಿಗಳು, ಆರೋಗ್ಯ ನಿರೀಕ್ಷಣಾಧಿಕಾರಿಗಳು, ಹಿರಿಯ ಪ್ರಾಥಮಿಕ ಆರೋಗ್ಯ ಸುರಕ್ಷತಾಧಿಕಾರಿಗಳು, ಆರೋಗ್ಯ ಸುರಕ್ಷಣಾ ಅಧಿಕಾರಿಗಳು ಹಾಜರಿದ್ದರು.

ವರ್ತಮಾನ
ಜನಹಿತಕ್ಕೆ ಉತ್ತಮ ಮಾಧ್ಯಮ

ಆರೋಗ್ಯ ಶಿಬಿರ: ಸೇವೆಯಾತ್ರೆ

ಮೈಸೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಸತತ 25 ವರ್ಷಗಳ ಸುಧೀರ್ಘ ಸೇವೆಯ ಅಂಗವಾಗಿ ಎಸ್.ಟಿ.ಮೋರ್ಚಾ ವತಿಯಿಂದ ಉಚಿತ ಕಣ್ಣಿನ ತಪಾಸಣೆ ಮತ್ತು ಆರೋಗ್ಯ ಶಿಬಿರವನ್ನು ನಡೆಸಲಾಯಿತು.

ಬೃಂದಾವನ ಆಸ್ಪತ್ರೆ, ಎಸ್.ಜಿ.ಕಣ್ಣಿನ ಆಸ್ಪತ್ರೆಯ ಸಹಯೋಗದೊಂದಿಗೆ ಸುಣ್ಣದಕೇರಿಯ ಸಮುದಾಯ ಭವನದಲ್ಲಿ ನಡೆದ ಕಾರ್ಯಕ್ರಮವನ್ನು ಮಾಜಿ ಮಹಾಪೌರ ಎಂ.ಶಿವಕುಮಾರ್ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಕ್ಷೇತ್ರದ ಬಿಜೆಪಿ ಅಧ್ಯಕ್ಷ ಗೋಪಾಲರಾಜೇಅರಸ್, ಜಯರಾಂ, ಜಯಶಂಕರ್, ಮುಖಂಡರಾದ ಜೋಗಪ್ಪ, ಅಶ್ವಥ್, ಎಸ್.ಟಿ.ಮೋರ್ಚಾ ಅಧ್ಯಕ್ಷ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿ ಕೃಷ್ಣನಾಯಕ, ನಗರ ಪಾಲಿಕೆ ಮಾಜಿ ಸದಸ್ಯ ಗುರುವಿನಾಯಕ, ಉಪಾಧ್ಯಕ್ಷ ಎಸ್.ಮಹೇಶ್ ಕುಮಾರ್, ಡಿ.ಪ್ರಕಾಶ್, ಲೋಕೇಶ್ ಜಯಸಿಂಹ, ಕೆ.ಆರ್. ಕ್ಷೇತ್ರದ ಎಸ್.ಟಿ. ಮೋರ್ಚಾ ಅಧ್ಯಕ್ಷ ನಂದೀಶ್, ವಿಜಯ್ ನಾಯಕ, ಹೇಮಂತ್, ವಾರ್ಡ್ ಅಧ್ಯಕ್ಷ ಜಿ.ಮಂಜುನಾಥ್, ಶಿವರಾಜ್, ಸಚಿನ್ ಸನತ್, ನಾಗೇಶ್ ಮತ್ತಿತರಿದ್ದರು.

26ರಂದು ವಾಲ್ಮೀಕಿ ಜಯಂತಿ ಆಚರಣೆ

ಮೈಸೂರು: ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅರ್ಥಪೂರ್ಣವಾಗಿ ಅಕ್ಟೋಬರ್ 26.ರಂದು ನಗರದ ಕರ್ನಾಟಕ ಕಲಾಮಂದಿರದಲ್ಲಿ ಆಚರಣೆ ಮಾಡಲಾಗು ವುದು ಎಂದು ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ತಿಳಿಸಿದರು.

ಅಪರ ಜಿಲ್ಲಾಧಿಕಾರಿಗಳ ಕಛೇರಿಯ ಸಭಾಂಗಣ ದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಹಮ್ಮಿಕೊಂಡಿದ್ದ ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು. ವಿವಿಧ ಜಯಂತಿ ಗಳನ್ನು ಅರ್ಥಪೂರ್ಣವಾಗಿ ಹಾಗೂ ಸಾಧಕರ ಸಂದೇಶಗಳನ್ನು ಸಮಾಜಕ್ಕೆ ಸಾರಲು, ಅವರ ಜೀವನ ಮೌಲ್ಯಗಳನ್ನು ಸಮಾಜಕ್ಕೆ ನೀಡುವ ಸಲುವಾಗಿ ವಿವಿಧ ಮಹನೀಯರ ಜಯಂತಿಗಳ ಆಚರಣೆ ಮಾಡಲಾ ಗುತ್ತಿದೆ. ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ಅ.26ರಂದು ಬೆಳಗ್ಗೆ 12 ಗಂಟೆಗೆ ಕರ್ನಾಟಕ ಕಲಾ ಮಂದಿರದಲ್ಲಿ ಆಚರಣೆ ಮಾಡಲಾಗುವುದು. ವೇದಿಕೆ ಕಾರ್ಯಕ್ರಮಕ್ಕೂ ಮೊದಲು ವೇದಿಕೆ ಮೇಲೆ ಗೀತಾ ಗಾಯನ ಏರ್ಪಡಿಸಲಾಗುವುದು. ಸಮುದಾಯದ ಮುಖಂಡರ ಸಲಹೆಯಂತೆ ದಿವ್ಯ ಸಾನಿಧ್ಯ ಹಾಗೂ ವಿಶೇಷ ಉಪನ್ಯಾಸ ನೀಡಲು ಸಂಪನ್ಮೂಲ ವ್ಯಕ್ತಿಯನ್ನು ಆಹ್ವಾನಿಸಲಾಗುವುದು ಎಂದರು.

ಸಮಗ್ರ ಬುಡಕಟ್ಟು ಅಭಿವೃದ್ಧಿ ಯೋಜನೆಯ ಯೋಜನಾ ಸಮನ್ವಯಾಧಿಕಾರಿ ಎಂ.ಕೆ.ಮಲ್ಲೇಶ್ ಮಾತನಾಡಿ ಜಯಂತಿಗಳ ಆಚರಣೆಗೆ ಶಿಷ್ಟಾಚಾರದಂತೆ ಆಮಂತ್ರಣ ಪತ್ರಿಕೆ ಮುದ್ರಿಸಿ ಜನಪ್ರತಿನಿಧಿಗಳಿಗೆ ಮುಖಂಡರಿಗೆ ಆಹ್ವಾನ ನೀಡಲಾಗುವುದು. ಕಲಾಮಂದಿರದಲ್ಲಿ ಗೀತಾ ಗಾಯನ ಏರ್ಪಡಿಸಲಾಗುವುದು. ಅ.26ರಂದು ಬೆಳಿಗ್ಗೆ 10 ಗಂಟೆಗೆ ಮೈಸೂರು ಅರಮನೆಯ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನದಿಂದ ಕಲಾಮಂದಿರದವರೆಗೆ ಸಾಂಸ್ಕೃತಿಕ ಮೆರವಣಿಗೆಯನ್ನು ಹಮ್ಮಿಕೊಳ್ಳಲಾಗಿದೆ. ಈ ಮೆರವಣಿಗೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವಿವಿಧ ಕಲಾತಂಡಗಳು, ಅಲಂಕೃತ ರಥ ಹಾಗೂ ಪೊಲೀಸ್ ಬ್ಯಾಂಡ್‌ಗಳು ವಿಶೇಷ ಮೆರುಗು ನೀಡಲಿವೆ ಎಂದು ತಿಳಿಸಿದರು.

ಮಾಜಿ ಸಂಸದರಿಗೆ ನಿರೀಕ್ಷಣಾ ಜಾಮೀನು

ಮೈಸೂರು: ಜಿಲ್ಲೆಯ ಟಿ.ನರಸೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಂಸದ ಪ್ರತಾಪ್ ಸಿಂಹ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಆದೇಶಿಸಿದೆ.

ಟಿ.ನರಸೀಪುರದಲ್ಲಿ ನಡೆದಿದ್ದ ಪ್ರತಿಭಟನೆ, ಸಾರ್ವಜನಿಕ ಸಭೆಯ ವೇಳೆ ಕಾನೂನು ಸುವ್ಯವಸ್ಥೆಗೆ ಧಕ್ಕೆ ತಂದ ಆರೋಪದಡಿ ಮಾಜಿ ಸಂಸದ ಪ್ರತಾಪ್ ಸಿಂಹ ಅವರ ವಿರುದ್ಧ ಟಿ. ನರಸೀಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈ ಹಿನ್ನೆಲೆಯಲ್ಲಿ ನಿರೀಕ್ಷಣಾ ಜಾಮೀನು ಕೋರಿ ಮಾಜಿ ಸಂಸದ ಪ್ರತಾಪ್ ಸಿಂಹ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಅರ್ಜಿ ವಿಚಾರಣೆ ನಡೆಸಿದ ಬೆಂಗಳೂರಿನ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ, ಪ್ರತಾ

ವಿಶೇಷ ಮಕ್ಕಳೊಂದಿಗೆ ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಜನ್ಮದಿನ ಆಚರಣೆ

ಮಂಡ್ಯ : ಜಿಲ್ಲೆಯ ಪ್ರಬುದ್ಧ ರಾಜಕಾರಣಿ ಹಾಗೂ ದೂರದೃಷ್ಟಿ ನಾಯಕ, ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ಅವರ ಜನ್ಮದಿನವನ್ನು ಅವರ ಹಿತೈಷಿಗಳ ಬಳಗದ ನೇತೃತ್ವದಲ್ಲಿ ಅತ್ಯಂತ ಅರ್ಥಪೂರ್ಣವಾಗಿ ಆಚರಿಸಲಾಯಿತು. ಸಿ.ಎಸ್. ಪುಟ್ಟರಾಜು ಅವರ ಹಿತೈಷಿಗಳ ಬಳಗದ ಕೆ.ಎನ್. ನವೀನ್ ಕುಮಾರ್ ಅವರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ, ನಗರದ ಪ್ರೇರಣಾ ಅಂಧ ಮತ್ತು ವಿಶೇಷ ಚೇತನರ ವಸತಿ ಶಾಲೆಯ ಮಕ್ಕಳೊಂದಿಗೆ ಹುಟ್ಟುಹಬ್ಬವನ್ನು ಆಚರಿಸಲಾಯಿತು.

ಈ ವಿಶೇಷ ದಿನದಂದು ಪ್ರೇರಣಾ ಶಾಲೆಯ ವಸತಿ ನಿಲಯದ ಮಕ್ಕಳಿಗೆ ಮಧ್ಯಾಹ್ನದ ಭೋಜನದ ವ್ಯವಸ್ಥೆ ಮಾಡುವ ಮೂಲಕ ಸಾರ್ಥಕತೆ ಮೆರೆಯಲಾಯಿತು.

ಶಾಲೆಯ ವಿಶೇಷ ಚೇತನ ಮಕ್ಕಳು ಅತ್ಯಂತ ಪ್ರೀತಿಯಿಂದ ಮಾಜಿ ಸಚಿವರಿಗೆ ಜನ್ಮದಿನದ ಶುಭಾಶಯಗಳನ್ನು ಕೋರಿದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಮಾತನಾಡಿದ ಕೆ.ಎನ್. ನವೀನ್ ಕುಮಾರ್, ಮಾಜಿ ಸಚಿವರ ಜನಸೇವೆಯನ್ನು ಸ್ಮರಿಸಿದರು. ಸಿ.ಎಸ್. ಪುಟ್ಟರಾಜು ಅವರು ಮಂಡ್ಯ ಜಿಲ್ಲೆ ಕಂಡ ಪ್ರಬುದ್ಧ ಹಾಗೂ ದೂರದೃಷ್ಟಿಯ ನಾಯಕರು. ನೀರಾವರಿ, ಶಿಕ್ಷಣ ಹಾಗೂ ಸಾಹಿತ್ಯ ಕ್ಷೇತ್ರಗಳಲ್ಲಿ ಅವರು ಶಾಶ್ವತವಾಗಿ ಉಳಿಯುವಂತಹ ಅತ್ಯಮೂಲ್ಯ ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದಾರೆ ಎಂದು ಅವರು ಬಣ್ಣಿಸಿದರು.

ವಿಶೇಷವಾಗಿ ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ಏತ ನೀರಾವರಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಸಾವಿರಾರು ರೈತ ಕುಟುಂಬಗಳಿಗೆ ನೆರವಾಗಿದ್ದಾರೆ ಹಾಗೂ ಒಣಗಿದ್ದ ಕೆರೆ-ಕಟ್ಟೆಗಳನ್ನು ತುಂಬಿಸುವ ಭಗೀರಥ ಪ್ರಯತ್ನ ಮಾಡಿದ್ದಾರೆ ಎಂದು ನವೀನ್ ಕುಮಾರ್ ಶ್ಲಾಘಿಸಿದರು.

ಶಿಕ್ಷಣ ಮತ್ತು ಧಾರ್ಮಿಕ ಕ್ಷೇತ್ರಕ್ಕೆ ಅಪಾರ ಕೊಡುಗೆ: ಪುಟ್ಟರಾಜು ಅವರ ಸೇವೆ ಕೇವಲ ನೀರಾವರಿಗೆ ಸೀಮಿತವಾಗಿಲ್ಲ. ಶಿಕ್ಷಣ ಕ್ಷೇತ್ರದಲ್ಲೂ ಅವರು ಅಪಾರ ಕಾಳಜಿ ಹೊಂದಿದ್ದು, ಮೇಲುಕೋಟೆ ಕ್ಷೇತ್ರದಾದ್ಯಂತ ಸರ್ಕಾರಿ ಶಾಲಾ ಕಟ್ಟಡಗಳ ನಿರ್ಮಾಣಕ್ಕೆ ಶ್ರಮಿಸಿದ್ದಾರೆ. ಜೊತೆಗೆ ಬಡ ಶಾಲಾ-ಕಾಲೇಜು ವಿದ್ಯಾರ್ಥಿಗಳ ಶುಲ್ಕ ಪಾವತಿಸುವ ಮೂಲಕ ಸಾವಿರಾರು ವಿದ್ಯಾರ್ಥಿಗಳ ಶೈಕ್ಷಣಿಕ ಭವಿಷ್ಯಕ್ಕೆ ಆಸರೆಯಾಗಿದ್ದಾರೆ ಎಂದು ತಿಳಿಸಿದರು.

ಧಾರ್ಮಿಕ ಕ್ಷೇತ್ರದಲ್ಲೂ ಮುಂಚೂಣಿಯಲ್ಲಿರುವ ಅವರು, ಆದಿಚುಂಚನಗಿರಿ ಹಾಗೂ ಸುತ್ತೂರು ಮಠಗಳ ಒಡನಾಡಿಯಾಗಿ ನಿರಂತರ ಸೇವೆ ಸಲ್ಲಿಸುತ್ತಿದ್ದಾರೆ. ಮಂಡ್ಯ ಸೇರಿದಂತೆ ರಾಜ್ಯಾದ್ಯಂತ ನೂತನವಾಗಿ ನಿರ್ಮಾಣವಾಗುತ್ತಿರುವ ಹಲವಾರು ದೇವಸ್ಥಾನಗಳಿಗೆ ಕೋಟ್ಯಂತರ ರೂಪಾಯಿಗಳ ದಾನ ನೀಡಿದ್ದಾರೆ ಎಂದು ಸ್ಮರಿಸಿದರು. ಭಗವಂತನು ಅವರಿಗೆ ಹೆಚ್ಚಿನ ಆಯಸ್ಸು ಮತ್ತು ಆರೋಗ್ಯವನ್ನು ಕರುಣಿಸಲಿ. ರಾಜ್ಯ ಹಾಗೂ ಮಂಡ್ಯ ಜಿಲ್ಲೆಗೆ ಅವರಿಂದ ಇನ್ನಷ್ಟು ಜನಸೇವೆ ಲಭಿಸುವಂತಾಗಲಿ. ಪ್ರೇರಣಾ ಶಾಲೆಯ ಈ ಮುಗ್ಧ ವಿಶೇಷ ಮಕ್ಕಳೊಂದಿಗೆ ಅವರ ಹುಟ್ಟುಹಬ್ಬವನ್ನು ಆಚರಿಸುತ್ತಿರುವುದು ನಮಗೂ ಅತ್ಯಂತ ಸಂತಸ ಹಾಗೂ ನೆಮ್ಮದಿ ತಂದಿದೆ ಎಂದು ನವೀನ್ ಕುಮಾರ್ ಹರ್ಷ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಪ್ರೇರಣಾ ಶಾಲೆಯ ಆಡಳಿತ ಮಂಡಳಿ, ಸಿಬ್ಬಂದಿ ವರ್ಗ ಹಾಗೂ ಸಿ.ಎಸ್. ಪುಟ್ಟರಾಜು ಅವರ ಹಿತೈಷಿ ಬಳಗದ ಕೆ.ಪಿ.ಶಶಿಕುಮಾರ್ , ನಂಜುಂಡಸ್ವಾಮಿ , ಶಿವರಾಮು , ಹೇಮಂತ್ ಕುಮಾರ್ ಉಪಸ್ಥಿತರಿದ್ದರು.

ವನ್ಯಜೀವಿಗಳ ಸಂರಕ್ಷಣೆ ಪ್ರತಿಯೊಬ್ಬರ ಹೊಣೆ

ಜನಸಹಭಾಗಿತ್ವದಿಂದಲೇ ವನ್ಯಜೀವಿ ರಕ್ಷಣೆ ಸಾಧ್ಯ: ಡಾ.ಎ.ಟಿ.ಶಿವರಾಮು

ನಾಗಮಂಗಲ: ಪ್ರತಿಯೊಂದು ಜೀವಿಗೂ ಬದುಕುವ ಹಕ್ಕಿದ್ದು, ಅವುಗಳ ಜೀವನ ಕ್ರಮ ಹಾಗೂ ಆವಾಸವನ್ನು ಅರಿತು ಸಂರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ ಎಂದು ಆದಿಚುಂಚನಗಿರಿ ವಿಶ್ವವಿದ್ಯಾಲಯದ ಡೀನ್ ಹಾಗೂ ಬಿಜಿಎಸ್ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲ ಡಾ. ಎ.ಟಿ. ಶಿವರಾಮು ಹೇಳಿದರು.

ನಾಗಮಂಗಲ ತಾಲೂಕಿನ ಬಿಜಿ ನಗರದಲ್ಲಿರುವ ಬಿಜಿಎಸ್ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಾದೇಶಿಕ ವಲಯ ಅರಣ್ಯಾಧಿಕಾರಿಗಳ ಕಚೇರಿ, ಎನ್.ಎಸ್.ಎಸ್ ಘಟಕ-10 ಹಾಗೂ ಇಕೋ ಕ್ಲಬ್ ವತಿಯಿಂದ ಆಯೋಜಿಸಿದ್ದ ವನ್ಯಜೀವಿ ಸಪ್ತಾಹ-2026 ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಆವಾಸಗಳನ್ನು ಬೆಸೆಯೋಣ, ವನ್ಯಜೀವಿಗಳನ್ನು ಬೆಳೆಸೋಣ' ಎಂಬ ರಾಷ್ಟ್ರೀಯ ಘೋಷವಾಕ್ಯದೊಂದಿಗೆ ಅ.2ರಿಂದ 8ರವರೆಗೆ ವನ್ಯಜೀವಿ ಸಪ್ತಾಹ ಆಚರಿಸಲಾಗುತ್ತಿದೆ. ಅರಣ್ಯ ಹಾಗೂ ವನ್ಯಜೀವಿ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸುವುದು, ಯುವಜನರು ಮತ್ತು ಸಮುದಾಯದ ಸಹಭಾಗಿತ್ವ ಹೆಚ್ಚಿಸುವುದು ಇದರ ಪ್ರಮುಖ ಉದ್ದೇಶವಾಗಿದೆ ಎಂದರು.

ಕನ್ನಡದ ಖ್ಯಾತ ಸಾಹಿತಿ ಪೂರ್ಣಚಂದ್ರ ತೇಜಸ್ವಿಯವರ ಅರಣ್ಯ, ವನ್ಯಜೀವಿ ಹಾಗೂ ಪ್ರಕೃತಿ ಪ್ರೀತಿಯನ್ನು ಸ್ಮರಿಸಿದ ಅವರು, ಪರಿಸರ ರತ್ನ ಪ್ರಶಸ್ತಿ ಪುರಸ್ಕೃತ ಪರಮಪೂಜ್ಯ ಶ್ರೀ ಬಾಲಗಂಗಾಧರನಾಥ ಮಹಾಸ್ವಾಮೀಜಿಯವರು ಐದು ಕೋಟಿ ಮರಗಳನ್ನು ಬೆಳೆಸುವ ಸಂಕಲ್ಪದೊಂದಿಗೆ ಪರಿಸರ ಸಂರಕ್ಷಣೆಗೆ ಮಹತ್ವದ ಕೊಡುಗೆ ನೀಡಿದ್ದಾರೆ ಎಂದರು.

ಶ್ರೀನಿರ್ಮಲಾನಂದನಾಥ ಮಹಾ ಸ್ವಾಮೀಜಿಯವರೂ ಪರಿಸರ ಪ್ರೇಮಿಗಳಾಗಿದ್ದು, ಮರಗಳೊಂದಿಗೆ ಬಾಂಧವ್ಯ ಬೆಳೆಸಿಕೊಂಡು ಅವುಗಳನ್ನು ಪ್ರೀತಿಯಿಂದ ಆರೈಕೆ ಮಾಡುವ ಸಂದೇಶವನ್ನು ಸಮಾಜಕ್ಕೆ ನೀಡಿದ್ದಾರೆ ಎಂದು ಹೇಳಿದರು. ಯುವಜನರು ಉತ್ತಮ ಅಭ್ಯಾಸ ಹಾಗೂ ಹವ್ಯಾಸಗಳನ್ನು ಬೆಳೆಸಿಕೊಂಡು ಪರಿಸರ ಸಂರಕ್ಷಣೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಪರಿಸರ, ಅರಣ್ಯ ಹಾಗೂ ವನ್ಯಜೀವಿಗಳು ಉಳಿದರೆ ಮಾತ್ರ ಮಾನವ ಸಮಾಜದ ಭವಿಷ್ಯ ಸುರಕ್ಷಿತವಾಗಿರಲು ಸಾಧ್ಯ. ಪ್ರಕೃತಿಯನ್ನು ಬದುಕಿನ ಅವಿಭಾಜ್ಯ ಅಂಗವೆಂದು ಪರಿಗಣಿಸಿದಾಗ ಮಾತ್ರ ಸಂರಕ್ಷಣಾ ಕಾರ್ಯ ಯಶಸ್ವಿಯಾಗಲಿದೆ ಎಂದು ಕರೆ ನೀಡಿದರು.

ಜನಸಹಭಾಗಿತ್ವದಿಂದ ವನ್ಯಜೀವಿ ಸಂರಕ್ಷಣೆ: ವಲಯ ಅರಣ್ಯಾಧಿಕಾರಿ ಎಸ್.ಸಂಪತ್ ಪಾಟೀಲ್ ಮಾತನಾಡಿ, ವನ್ಯಜೀವಿ ಸಪ್ತಾಹದ ಮೂಲಕ ಅರಣ್ಯ ಹಾಗೂ ವನ್ಯಜೀವಿಗಳ ಸಂರಕ್ಷಣೆಯ ಅಗತ್ಯವನ್ನು ಜನಸಾಮಾನ್ಯರಿಗೆ ತಿಳಿಸಲಾಗುತ್ತಿದೆ. ಅರಣ್ಯ ಕರ್ನಾಟಕ: ಜನಸಮುದಾಯ, 'ನಾಡು ಮತ್ತು ವನ್ಯಜೀವಿಗಳ ಸಹಬಾಳ್ವೆ' ಎಂಬ ಸಂದೇಶದೊಂದಿಗೆ ಈ ವರ್ಷದ ಕಾರ್ಯಕ್ರಮ ನಡೆಯುತ್ತಿದೆ ಎಂದರು.

ಅರಣ್ಯ ಇಲಾಖೆ ಮಾತ್ರವಲ್ಲದೆ ವಿದ್ಯಾರ್ಥಿಗಳು, ಯುವಜನರು ಹಾಗೂ ಸಾರ್ವಜನಿಕರು ಕೈಜೋಡಿಸಿದಾಗ ವನ್ಯಜೀವಿ ಸಂರಕ್ಷಣಾ ಕಾರ್ಯ ಮತ್ತಷ್ಟು ಪರಿಣಾಮಕಾರಿಯಾಗಲಿದೆ. ಅಳಿವಿನಂಚಿನಲ್ಲಿರುವ ವನ್ಯಜೀವಿಗಳನ್ನು ಉಳಿಸುವಲ್ಲಿ ಪ್ರತಿಯೊಬ್ಬರೂ ತಮ್ಮ ಜವಾಬ್ದಾರಿ ನಿರ್ವಹಿಸಬೇಕು ಎಂದು ಹೇಳಿದರು.

ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಎ.ಎಚ್. ಗೋಪಾಲ್ ಪ್ರಾಸ್ತಾವಿಕವಾಗಿ ಮಾತನಾಡಿ, ವನ್ಯಜೀವಿ ಸಪ್ತಾಹದ ಉದ್ದೇಶ ಹಾಗೂ ಮಹತ್ವ ವಿವರಿಸಿದರು. ಗಸ್ತು ಅರಣ್ಯಾಧಿಕಾರಿ ಪ್ರವೀಣ್ ಜಿ. ವರಗಿ ಅವರು ಅರಣ್ಯ ಮತ್ತು ವನ್ಯಜೀವಿಗಳ ಕುರಿತು ಮಾಹಿತಿ ನೀಡಿದರು.

ಅರಣ್ಯ ಇಲಾಖೆ ವತಿಯಿಂದ ಆಯೋಜಿಸಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಪಡೆದ ವಿದ್ಯಾರ್ಥಿಗಳು ಪ್ರಕೃತಿ ಹಾಗೂ ವನ್ಯಜೀವಿ ಸಂರಕ್ಷಣೆಯ ಕುರಿತು ತಮ್ಮ ಅಭಿಪ್ರಾಯ ಹಂಚಿಕೊಂಡರು. ಇದೇ ವೇಳೆ ವನ್ಯಜೀವಿಗಳ ಕುರಿತ ಸಾಕ್ಷ್ಯಚಿತ್ರ ಪ್ರದರ್ಶಿಸುವ ಮೂಲಕ ವಿದ್ಯಾರ್ಥಿಗಳಲ್ಲಿ ಸಂರಕ್ಷಣೆಯ ಕುರಿತು ಜಾಗೃತಿ ಮೂಡಿಸಲಾಯಿತು.

ಕಾರ್ಯಕ್ರಮದಲ್ಲಿ ಎನ್.ಎಸ್.ಎಸ್ ಕಾರ್ಯಕ್ರಮಾಧಿಕಾರಿ ಸಿ.ಎಲ್.ಶಿವಣ್ಣ, ಉಪ ವಲಯ ಅರಣ್ಯಾಧಿಕಾರಿ ಶಿವಲಿಂಗಯ್ಯ ಕೆ.ಆರ್., ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಬಿ.ಪ್ರಶಾಂತ್, ಗಂಗಾಧರ್ ಬಿ.ಎಸ್., ಕಳಸೇಗೌಡ, ಚಿಕ್ಕಣ್ಣ, ಅರ್ಜಿಯ, ಡಾ.ಎ.ಸಿ.ದೇವಾನಂದ್ ಇದ್ದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು 2028ಕ್ಕೆ ಮತ್ತೊಮ್ಮೆ ಶಾಸಕರಾಗಿ ಆಯ್ಕೆ-ಚಿನಕುರಳಿ ರಮೇಶ್

ಪಾಂಡವಪುರ : ಮೇಲುಕೋಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಸಮಗ್ರ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಅಪಾರ ಜನಮನ್ನಣೆ ಗಳಿಸಿರುವ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು 2028ಕ್ಕೆ ಮತ್ತೊಮ್ಮೆ ಶಾಸಕರಾಗಿ ಆಯ್ಕೆಯಾಗುವುದು ನಿಶ್ಚಳವಾಗಿದೆ ಎಂದು ಕಿಸಾನ್ ಕಾಂಗ್ರೆಸ್ ಮೇಲುಕೋಟೆ ಘಟಕ ಅಧ್ಯಕ್ಷ ಚಿನಕುರಳಿ ರಮೇಶ್ ಹೇಳಿದರು.

ತಾಲೂಕಿನ ಚಿನಕುರಳಿ ಗ್ರಾಮದಲ್ಲಿ ರೈತಸಂಘದ ಮುಖಂಡರು ಹಾಗೂ ಚಿನಕುರಳಿ ಗ್ರಾಮಸ್ಥರ ವತಿಯಿಂದ ಮೇಲುಕೋಟೆ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರ 49ನೇ ಜನ್ಮದಿನದ ಪ್ರಯುಕ್ತ ಗಣಪತಿ ದೇವಸ್ಥಾನದಲ್ಲಿ ವಿಶೇಷ ಅಭಿಷೇಕ, ಅರ್ಚನೆ, ಅನ್ನಸಂತರ್ಪಣೆ ಹಾಗೂ ಅಂಗನವಾಡಿ ಮಕ್ಕಳಿಗೆ ಊಟದ ಬ್ಯಾಗ್, ನೀರಿನ ಬಾಟಲ್ ಹಾಗೂ ಸಿಹಿ ವಿತರಣಾ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕಳೆದ ಮೂರುವರೆ ವರ್ಷಗಳಿಂದ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಶಾಸಕ ದರ್ಶನ್ ಪುಟ್ಟಣ್ಣಯ್ಯ ಅವರು ಮತ್ತೊಮ್ಮೆ ಶಾಸಕರಾಗುವ ಮೂಲಕ ರಾಜ್ಯದಲ್ಲಿ ಮಾದರಿಯಾಗುವಂತೆ ಕೆಲಸ ಮಾಡಲಿದ್ದಾರೆ. ಅವರಿಗೆ ತಾಯಿ ಚಾಮುಂಡೇಶ್ವರಿ ಆರೋಗ್ಯ, ಆಯಸ್ಸು ಹಾಗೂ ಉನ್ನತ ಅಧಿಕಾರ ದೊರಕುವಂತೆ ಮಾಡಲಿ ಎಂದು ಶುಭ ಹಾರೈಸಿದರು.

ರೈತ ಮುಖಂಡ ಸಿ.ಕೆ.ಪುಟ್ಟೇಗೌಡ ಮಾತನಾಡಿ, ಇಡೀ ರಾಜ್ಯವೇ ಮೇಲುಕೋಟೆ ವಿಧಾನಸಭಾ ಕ್ಷೇತ್ರದತ್ತ ತಿರುಗಿ ನೋಡುವ ಮಾದರಿಯಲ್ಲಿ ಶಾಸಕ ದರ್ಶನ್ ಪುಟ್ಟಣ್ಣಯ್ಯ ಕೆಲಸ ಮಾಡುತ್ತಿದ್ದಾರೆ. ಅವರ ಜನ್ಮದಿನದ ಅಂಗವಾಗಿ ಚಿನಕುರಳಿ ಗ್ರಾ.ಪಂ ವ್ಯಾಪ್ತಿಯಲ್ಲಿನ ಅಂಗನವಾಡಿ ಮಕ್ಕಳಿಗೆ ಲಂಚ್ ಬ್ಯಾಗ್, ವಾಟರ್ ಕ್ಯಾನ್ ಹಾಗೂ ಸಿಹಿ ವಿತರಿಸಲಾಗುತ್ತಿದೆ. ದೇವಸ್ಥಾನದಲ್ಲಿ ಶಾಸಕರ ಹೆಸರಿನಲ್ಲಿ ಅಭಿಷೇಕ, ಅರ್ಚನೆ, ವಿಶೇಷ ಪೂಜೆ ಹಾಗೂ ಅನ್ನಸಂತರ್ಪಣೆ ವ್ಯವಸ್ಥೆ ಮಾಡಲಾಗಿದೆ ಎಂದರು.

ಈ ವೇಳೆ ಗ್ರಾಮದ ಮುಖಂಡರಾದ ಸಿದ್ದಲಿಂಗೇಗೌಡ, ಸಿ.ಕೆ.ಪುಟ್ಟೇಗೌಡ, ಸಿ.ಎಂ. ರಮೇಶ್, ಆರ್.ಟಿ.ರವಿ, ನಾಗೇಶ, ಗಜೇಂದ್ರ ಗೋವಿಂದರಾಜು, ಪ್ರಕಾಶ್, ಇಳ್ಳೇನಹಳ್ಳಿ ವೆಂಕಟೇಶ್, ಕಾಳೇಗೌಡನಕೊಪ್ಪಲು ವೆಂಕಟೇಶ್, ಇಳ್ಳೇನಹಳ್ಳಿ ನರಸಿಂಹೇಗೌಡ, ಸಿಡಿಪಿಒ ಪೂರ್ಣಿಮಾ, ಮೇಲ್ವಿಚಾರಕಿ ಝಕೀಯಾಭಾನು ಹಾಗೂ ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕರು ಉಪಸ್ಥಿತರಿದ್ದರು.

ಮೃತ್ಯು ಭೀತಿಯಿಲ್ಲದ ಬದುಕಿನ ಕಲಿಕೆ

ಸಾವಿನ ಭಯದಿಂದ ಹೊರಬರುವ ಕಲಿಕೆ ಬದುಕಿನ ದೊಡ್ಡ ಪಾಠ. ಈ ಯೋಚನೆ ಮೆದುಳಿನ ಒಂದು ಭಾಗವನ್ನು ಎಚ್ಚರಗೊಳಿಸಿ ನಿದ್ರೆಯ ಹಾರ್ಮೋನ್ ಚಕ್ರವನ್ನು ಸರಿಪಡಿಸುತ್ತದೆ. ನಿದ್ರೆ ಚೆನ್ನಾಗಿ ಬಂದು ದೇಹದ ದುರಸ್ತಿ ಕೆಲಸ ವೇಗವಾಗುತ್ತದೆ. ಆಸ್ಟ್ರೇಲಿಯಾದ ಅಧ್ಯಯನ ಹೇಳುತ್ತದೆ: ಸಾವಿನ ಬಗ್ಗೆ ಮನೆಯಲ್ಲಿ ಬಿಚ್ಚು ಮನಸ್ಸಿನಿಂದ ಮಾತನಾಡುವ ಕುಟುಂಬಗಳಲ್ಲಿ ಆತಂಕ 31% ಕಡಿಮೆಯಾಗುತ್ತದೆ. ಅರಿವೇ ಭಯಕ್ಕೆ ಕಡಿವಾಣ. ಈ ಕಲಿಕೆ ಸಮಾಜಕ್ಕೆ ಕನ್ನಡಿ ಹಿಡಿಯುತ್ತದೆ.

ಸ್ಮಶಾನವನ್ನು ತಿಂಗಳಿಗೊಮ್ಮೆ ಸ್ವಚ್ಛ ಮಾಡುವ ಕಾಲೇಜು ಯುವಕರು ಊರಿಗೆ ಜೀವನದ ಪಾಠ ಹೇಳುತ್ತಾರೆ. ತನ್ನ ಅಂಗಾಂಗ ದಾನದ ನಿರ್ಧಾರವನ್ನು ಮಕ್ಕಳಿಗೆ ತಿಳಿಸಿ ನೋಂದಣಿ ಮಾಡಿಸುವ ತಾಯಿ ತ್ಯಾಗದ ಅರ್ಥ ಕಲಿಸುತ್ತಾಳೆ. ಅಂತಿಮ ಕಾರ್ಯದಲ್ಲಿ ಅನಗತ್ಯ ಖರ್ಚು ಬಿಟ್ಟು ಆ ಹಣವನ್ನು ಬಡ ವಿದ್ಯಾರ್ಥಿಗೆ ಸಹಾಯವಾಗಿ ನೀಡುವ ಹಿರಿಯ ಹೊಸ ಸಂಪ್ರದಾಯ ಹುಟ್ಟುಹಾಕುತ್ತಾನೆ. ಒಬ್ಬರ ತಿಳಿವಳಿಕೆ ಇಡೀ ಊರಿಗೆ ದಾರಿದೀಪವಾಗುತ್ತದೆ.

ಭಯ ಗೆಲ್ಲಲು: ಬೆಳಗ್ಗೆ ಮೂರು ನಿಮಿಷ ಇಂದು ಕೊನೆಯ ದಿನವಾದರೆ ಏನು ಮಾಡುವೆ ಎಂದು ಯೋಚಿಸಿ. ದಿನಕ್ಕೊಮ್ಮೆ ಗಿಡಕ್ಕೆ ನೀರೆದು ಜೀವದ ಚಕ್ರ ನೋಡಿ. ವಾರಕ್ಕೊಮ್ಮೆ ಆಸ್ಪತ್ರೆಯಲ್ಲಿ ಸೇವೆ ಮಾಡಿ. ಹುಣ್ಣಿಮೆಯ ರಾತ್ರಿ ನಕ್ಷತ್ರ ನೋಡುತ್ತ ನಾನು ಈ ಬ್ರಹ್ಮಾಂಡದ ಒಂದು ಚಿಕ್ಕ ಕಣ ಎಂದು ಭಾವಿಸಿ. ಆಗ ಪ್ರತಿ ಉಸಿರೂ ಹಬ್ಬವಾಗುತ್ತದೆ.

ಕಷ್ಟ ಅನುಭವಿಸಿದವರಿಗೆ ಮಾತ್ರ ನೊಂದವರ ಬಗ್ಗೆ ಕಾಳಜಿ, ಕರುಣೆ ಹೆಚ್ಚು ಮೇರು ನಟ ನಾನಾ ಪಾಟೇಕರ್ ಸಮಾಜಮುಖಿಯಾಗಿಲು ಇದೇ ಪ್ರೇರಣೆ

| ಪಾ.ಶ್ರೀ.ಅನಂತರಾಮ
ಹಿರಿಯ ಪತ್ರಕರ್ತ,

1951ರ ಜನವರಿ 1 ರಂದು ಮಹಾರಾಷ್ಟ್ರದ ರಾಯಗಡ ಜಿಲ್ಲೆಯ ಮುರುದ್-ಜಂಜಿರಾದಲ್ಲಿ ಬಹುಭಾಷಾ ನಟ ವಿಶ್ವನಾಥ ಪಾಟೇಕರ್ ಅವರು ನಿರ್ಮಾಲ ಪಾಟೇಕರ್ ಮತ್ತು ಗಜಾನನ (ದಿನಕರ) ಪಾಟೇಕರ್ ಅವರ ಮಗನಾಗಿ ಜನಿಸಿದರು. ಅವರು ತಮ್ಮ ಬದುಕಿನುದ್ದಕ್ಕೂ ನಾನಾ ಪಾಟೇಕರ್ ಎಂದೇ ಪ್ರಸಿದ್ಧರಾಗಿದ್ದರು.

ಸಾಮಾನ್ಯ ಮರಾಠ ಕುಟುಂಬದಲ್ಲಿ ಜನಿಸಿದ ನಾನಾ ಪಾಟೇಕರ್ ತುಂಬಾ ಕಷ್ಟಪಟ್ಟು ಶಿಕ್ಷಣ ಪಡೆದರು, ತಂದೆ-ತಾಯಿ ಕುಟುಂಬ ನಿರ್ವಹಣೆಗಾಗಿ ಕಷ್ಟ ಪಡುತ್ತಿದ್ದನ್ನು ನೋಡಿದ್ದ ಅವರು ಪ್ರಾರಂಭದಲ್ಲಿ ಬೀದಿಗಳಲ್ಲಿ ನ್ಯೂಸ್ ಪೇಪರ್ ಮಾರಾಟ ಮಾಡಿ, ಗೋಡೆಗಳ ಮೇಲೆ ಚಿತ್ರಗಳನ್ನು ಬಿಡಿಸಿ ಜನರು ನೀಡುತ್ತಿದ್ದ ಹಣದಲ್ಲಿ ತಾಯಿಗೆ ಒಂದಿಷ್ಟು ಹಣ ಕೊಟ್ಟು ಉಳಿದ ಹಣದಲ್ಲಿ ಮುಂಬೈನ ಸರ್ ಜೆಜೆ ಇನ್‌ಸ್ಟಿಟ್ಯೂಟ್ ಆಫ್ ಅಪ್ಲೈಡ್ ಆರ್ಟ್ಸ್ ಕಾಲೇಜಿಗೆ ಸೇರಿ ರಂಗ ಕಲೆ ಶಿಕ್ಷಣ ಪಡೆದರು.

ಶಾಲಾ-ಕಾಲೇಜು ದಿನಗಳಲ್ಲಿ ಓದಿಗಿಂತ ಪಠ್ಯೇತರ ಚಟುವಟಿಕೆಗಳಲ್ಲಿ ತಮ್ಮ ಪ್ರತಿಭೆಯನ್ನು ಸಾದರಪಡಿಸುವ ಮೂಲಕ ಎಲ್ಲರ ಗಮನ ಸೆಳೆದಿದ್ದ ನಾನಾ ಪಾಟೇಕರ್ ಅವರು ರಂಗ ಕಲೆಯಲ್ಲಿ ಪದವಿ ಪಡೆದ ಬಳಿಕ ಅನೇಕ ಮರಾಠಿ ಮತ್ತು ಹಿಂದಿ ನಾಟಕಗಳಲ್ಲಿ ಅಭಿನಯಿಸಿ ರಂಗಭೂಮಿ ಕ್ಷೇತ್ರದಲ್ಲಿ ಪ್ರತಿಭಾವಂತ ನಟರಾಗಿ ಹೊರ ಹೊಮ್ಮಿದರು. ನಾಟಕಗಳಿಂದ ಗಳಿಸಿದ ಹಣದಲ್ಲಿ ತಂದೆ-ತಾಯಿ ಕುಟುಂಬಕ್ಕಾಗಿ ಪಡುತ್ತಿದ್ದ ಕಷ್ಟಕ್ಕೆ ಕೊಂಚ ಪರಿಹಾರ ಸಿಗಲು ನೆರವಾಗಿ ಮನೆಯವರ ಅಚ್ಚುಮೆಚ್

ಸಿನಿಮಾ ವರದಿ: ಬಿ.ಜೆ.ರವಿಕುಮಾರ್

ಸಿನಿಮಾ ವರ್ತಮಾನ

ಲೂಸ್ ಮಾದ ಯೋಗಿ 51 ಚಿತ್ರ 'ಫಾರೆವರ್'

ಲೂಸ್ ಮಾದ ಯೋಗಿ ಅಭಿನಯದ 51 ನೇ ಚಿತ್ರ "ಫಾರೆವರ್". ಎಂ.ವೆಂಕಟನಾರಾಯಣ್ ನಿರ್ಮಿಸುತ್ತಿರುವ ಹಾಗೂ ಯೋಗೇಶ್ ಎಂ ನಿರ್ದೇಶಿಸುತ್ತಿರುವ ಈ ಚಿತ್ರದ ಎರಡನೇ ಹಂತದ ಚಿತ್ರೀಕರಣ ಮುಕ್ತಾಯವಾಗಿದೆ. ಬೆಂಗಳೂರನಲ್ಲೇ ಚಿತ್ರೀಕರಣ ನಡೆದಿದೆ. ಹೆಸರಾಂತ ನಿರ್ದೇಶಕ ರವಿವರ್ಮ ಅವರ ಸಾಹಸ ಸಂಯೋಜನೆಯಲ್ಲಿ ಮೈನವಿರೇಳಿಸುವ ಸಾಹಸ ಸನ್ನಿವೇಶ ಹಾಗೂ ಖ್ಯಾತ ನೃತ್ಯ ನಿರ್ದೇಶಕ ಮುರಳಿ ಮಾಸ್ಟರ್ ಅವರ ನೃತ್ಯ ಸಂಯೋಜನೆಯಲ್ಲಿ ಹಾಡೊಂದರ ಚಿತ್ರೀಕರಣ ಸೇರಿದಂತೆ ಮಾತಿನ ಭಾಗದ ಚಿತ್ರೀಕರಣ ಸಹ ಎರಡನೇ ಹಂತದಲ್ಲಿ ನಡೆದಿದೆ. ನಾಯಕ ಲೂಸ್ ಮಾದ ಯೋಗಿ, ನಾಯಕಿ ಆಕಾಂಕ್ಷ ರಾವ್, ಪ್ರಮೋದ್ ಶೆಟ್ಟಿ, ವಿಜಯ್ ಚೆಂಡೂರ್, ಗೌರವ್ ಶೆಟ್ಟಿ, ಅಶ್ವಿನ್ ಪಲ್ಲಕ್ಕಿ, ಮಾಲಾ, ಕಡ್ಡಿಪುಡಿ ಚಂದ್ರು, ಅನಂತ್ ಮುಂತಾದವರು ಈ ಹಂತದ ಚಿತ್ರೀಕರಣದಲ್ಲಿ ಭಾಗಿಯಾಗಿದ್ದರು. ಸದ್ಯದಲ್ಲೇ ಮೂರನೇ ಹಂತದ ಚಿತ್ರೀಕರಣ ಸಹ ಆರಂಭವಾಗಲಿದೆ.

ಈ ಚಿತ್ರದಲ್ಲಿ ಲವ್, ಸೆಂಟಿಮೆಂಟ್, ಆಕ್ಷನ್ ಸೇರಿದಂತೆ ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳು ಇದೆ. ನಿರ್ದೇಶಕರೆ ಕಥೆ, ಚಿತ್ರಕಥೆ ಬರೆದಿದ್ದು, ಸಂಭಾಷಣೆ ರಘು ನಿಡುವಳ್ಳಿ ಅವರದು. ಪ್ರದ್ಯೋತನ್ ಸಂಗೀತ ನಿರ್ದೇಶನ ಹಾಗೂ ಸಂಕೇತ್ ಛಾಯಾಗ್ರಹಣ "ಫಾರೆವರ್" ಚಿತ್ರಕ್ಕಿದೆ.

ಈಗಾಗಲೇ ಈ ಚಿತ್ರದ ಫಸ್ಟ್ ಲುಕ್ ಎಲ್ಲರ ಗಮನ ಸೆಳೆದಿದ್ದು, ಯೋಗಿ ಅವರು ಬೈಕ್ ಲವರ್ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

"ಜಾಕಿ 42" ನ.30 ಕ್ಕೆ ಬಿಡುಗಡೆ

ಗುರತೇಜ್ ಶೆಟ್ಟಿ ನಿರ್ದೇಶನದ, ಕಿರಣ್ ರಾಜ್ ನಾಯಕನಾಗಿ ನಟಿಸಿರುವ "ಜಾಕಿ 42" ಚಿತ್ರ ನವೆಂಬರ್ 20 ರಂದು ಬಿಡುಗಡೆಯಾಗುತ್ತಿದೆ.

ಭಾರತಿ ಸತ್ಯ ನಾರಾಯಣ್ ನಿರ್ಮಾಪಕರು. ಕುದುರೆ ರೇಸ್ ಹಿನ್ನೆಲೆಯಲ್ಲಿ ನಡೆಯುವ ಕಥೆ ಹಾಗೂ ಕೌಟುಂಬಿಕ ಮೌಲ್ಯಗಳನ್ನೊಳಗೊಂಡ " ಜಾಕಿ 42" ಚಿತ್ರದ ಎರಡು ಹಾಡುಗಳು ಈಗಾಗಲೇ ಬಿಡುಗಡೆಯಾಗಿದೆ.

ಸ್ಪೋರ್ಟ್ಸ್ ಜಾನರ್ ಸಿನಿಮಾ ಅದರೂ, ಫ್ಯಾಮಿಲಿ ಎಮೋಷನ್ಸ್ ಸನ್ನಿವೇಶಗಳು ಸಹ ಇದೆ. ಮೂರು ಹಾಡುಗಳು ಹಾಗೂ ಒಂದು ಸಾಹಸ ಸನ್ನಿವೇಶವಿದ್ದು, ಹಾಸ್ಯ ಸನ್ನಿವೇಶಗಳು ಸಹ ಜನರಿಗೆ ಮನೋರಂಜನೆ ನೀಡುತ್ತದೆ. ಇದೊಂದು ಸಂಪೂರ್ಣ ಕಮರ್ಷಿಯಲ್ ಸಿನಿಮಾ ಎಂದು ನಿರ್ದೇಶಕರು ತಿಳಿಸಿದ್ದಾರೆ.

ಹೃತಿಕ ಶ್ರೀನಿವಾಸ್ ನಾಯಕಿಯಾಗಿ ನಟಿಸಿರುವ ಈ ಚಿತ್ರದ ತಾರಾಬಳಗದಲ್ಲಿ ಯುಕ್ತ, ರಾಜೇಂದ್ರ ಕಾರಂತ್, ಬಲ ರಾಜ್ ವಾಡಿ, ಗಿರೀಶ್ ಹೆಗ್ಡೆ, ಅರುಣ್ ಆಚಾರ್, ಯಶ್ ಶೆಟ್ಟಿ, ದೀಪಕ್ ರೈ ಪಣಜೆ, ಶಾಂತಲಾ ಕಾಮತ್ ಹಾಗೂ ಹೆಸರಾಂತ ಕಲಾವಿದರು ಅಭಿನಯಿಸಿದ್ದಾರೆ, ವಿನೋದ್ ಯಜಮಾನ್ಯ ಸಂಗೀತ ನಿರ್ದೇಶನ, ರಾಘವೇಂದ್ರ ಬಿ ಕೋಲಾರ್ ಛಾಯಾಗ್ರಹಣ, ಭೂಷಣ್ ನೃತ್ಯ ನಿರ್ದೇಶನ ಹಾಗೂ ಉಮೇಶ್ ಆರ್ ಬಿ ಸಂಕಲನ "ಜಾಕಿ 42" ಚಿತ್ರಕ್ಕಿದೆ.

ರಾಮರಸದಲ್ಲಿ ಅನುಷಾ ರೈ

'ರಾಮರಸ' ಚಿತ್ರೀಕರಣವನ್ನು ಪೂರ್ಣಗೊಳಿಸಿ, ಪೋಸ್ಟ್–ಪ್ರೊಡಕ್ಷನ್ ಹಂತಕ್ಕೆ ಕಾಲಿಟ್ಟಿದೆ. ಚಿತ್ರಕ್ಕೆ ಇದೀಗ ಮತ್ತೊಂದು ದೊಡ್ಡ ಸರ್ಪ್ರೈಸ್ ಸೇರ್ಪಡೆಯಾಗಿದೆ.

ತಾರೆ ಅನುಷಾ ರೈ 'ರಾಮರಸ' ತಂಡವನ್ನು ಸೇರಿಕೊಂಡಿದ್ದಾರೆ.

ಮೌನವೇ ಮಾತಾಗಿರುವ ಸುಂದರಿ – ಆತ್ಮೀಯ ಜೀವನವನ್ನು ಹೊಂದಿರುವ ಸೌಮ್ಯ ಶಿಕ್ಷಕಿಯಾಗಿ ನಟಿಸುತ್ತಿದ್ದಾರೆ. ಅವರ ಪಾತ್ರವು ಕಥೆಗೆ ಭಾವನೆ, ಆಳ ಮತ್ತು ಶಾಂತತೆಯನ್ನು ತರುತ್ತದೆ ಮತ್ತು ಚಿತ್ರದ ಅತ್ಯಂತ ಸ್ಮರಣೀಯ ಅಂಶಗಳಲ್ಲಿ ಒಂದಾಗಲಿದೆ. ಎನ್ನುತ್ತಾರೆ ನಿರ್ದೇಶಕರು. ಕಾರ್ತಿಕ್ ಮಹೇಶ್, ಪ್ರಜ್ವಲ್ ದೇವರಾಜ್, ಶರಣ್ ಮತ್ತು ಹೆಬಾ ಪಟೇಲ್ ಮುಂತಾದ ತಾರಾಬಳಗವಿದೆ. ಗುರು ದೇಶಪಾಂಡೆ ಮತ್ತು ವಿಕ್ರಮ್ ಆರ್ಯ ಚಿತ್ರ ನಿರ್ಮಿಸುತ್ತಿದ್ದಾರೆ. ಚಿತ್ರದ ಅಧಿಕೃತ ಟೀಸರ್ ಮತ್ತು ಪಾತ್ರಗಳ ಫಸ್ಟ್ ಲುಕ್ ಪೋಸ್ಟರ್‌ಗಳನ್ನು ಶೀಘ್ರದಲ್ಲೇ ಅನಾವರಣಗೊಳಿಸಲಾಗುವುದು.

ದೇವರ ಅಸ್ತಿತ್ವಕ್ಕೆ ಸಾಕ್ಷಾತ್ಕಾರ'ದ ಅಂಕ್

"ಸಾಕ್ಷಾತ್ಕಾರ" ಚಿತ್ರ ಆಗ ಎಲ್ಲರ ಮನ ಗೆದ್ದಿತ್ತು. ಈಗ ಅದೇ ಶೀರ್ಷಿಕೆಯನ್ನಿಟ್ಟುಕೊಂಡು ಡಾ॥ಎಸ್ ಎಲ್ ಎನ್ ಸ್ವಾಮಿ 30 ನಿಮಿಷಗಳ ಕಿರುಚಿತ್ರ ನಿರ್ದೇಶಿಸಿದ್ದಾರೆ. ರಂಗಭೂಮಿ ಹಾಗೂ ಕಿರುತೆರೆಯಲ್ಲಿ ಹೆಸರು ಮಾಡಿರುವ ಎಸ್ ಎಲ್ ಎನ್ ಸ್ವಾಮಿ ಅವರ ಯಲಹಂಕದ ಅಸ್ತಿತ್ವಂ ಥಿಯೇಟರ್ ಫೌಂಡೇಶನ್ ಸಂಸ್ಥೆ ಇದನ್ನು ನಿರ್ಮಾಣ ಮಾಡಿದೆ. ಇತ್ತೀಚೆಗೆ ಈ ಕಿರುಚಿತ್ರದ ಪ್ರದರ್ಶನ ಹಾಗೂ ಪತ್ರಿಕಾಗೋಷ್ಠಿ ನಡೆಯಿತು

ಕಿರುಚಿತ್ರ "ಸಾಕ್ಷಾತ್ಕಾರ" ಸನಾತನ ಧರ್ಮ ಪರಂಪರೆಯ ಸತ್ಯದ ಹುಡುಕಾಟದ ಪ್ರಯತ್ನ. ದೇವರ ಅಸ್ತಿತ್ವವನ್ನು ಹುಡುಕುವ ಮಕ್ಕಳ ಪ್ರಯತ್ನದಲ್ಲಿ ಕಂಡುಕೊಳ್ಳುವ ಸರಳ ಉತ್ತರವೇ " ಸಾಕ್ಷಾತ್ಕಾರ ". ಮಕ್ಕಳ ಪ್ರಶ್ನೆಗಳಿಗೆ ಉತ್ತರಿಸುವ ಪೋಷಕರ ಜವಾಬ್ದಾರಿಯನ್ನು ಈ ಕಿರುಚಿತ್ರ ನೆನಪಿಸುತ್ತದೆ. ಜೊತೆಗೆ ಪೋಷಕರು ಮಾಡುವ ತಪ್ಪನ್ನು ಎತ್ತಿ ತೋರಿಸುತ್ತದೆ. ಸಂಸ್ಕಾರ , ಸಂಸ್ಕೃತಿಯನ್ನು ಉಳಿಸುವ ಹೊಣೆ ಸಮಾಜದ್ದು ಎಂದುಎಚ್ಚರಿಸುತ್ತದೆ. ಜೀವನ ಧರ್ಮವನ್ನು ಮನುಷ್ಯ ಧರ್ಮವನ್ನು ಅನುಸರಿಸುವ ಧರ್ಮ ಸೌಹಾರ್ದತೆಯ ಒಳ್ಳೆ ಸಂದೇಶ ಕೂಡ ಈ " ಸಾಕ್ಷಾತ್ಕಾರ" ದಲ್ಲಿದೆ. ಸಾಕ್ಷಿ ಪ್ರಶಾಂತ್ ನಾಯ್ಕ , ಪೂರ್ವಿ ಮಹದೇವಪ್ಪ ಏಕಾಂತ್, ಸನ್ನಿಧಿ ಹವಾಲ್ದಾರ್, ಟಿ.ಎಂ.ಸುಪ್ರಿಯಾಶ್ರೀ ಮುಖ್ಯಭೂಮಿಕೆಯಲ್ಲಿ ನಟಿಸಿದ್ದು ವಿಶೇಷ ಪಾತ್ರದಲ್ಲಿ ಮಹದೇವ್ ಯುಗೇಯುಗೇ ಹಾಗೂ ಗೌರವ ಪಾತ್ರದಲ್ಲಿ ಡಾ॥ ಆನಂದ್ ಗುರೂಜಿ ಅಭಿನಯಿಸಿದ್ದಾರೆ.

"ನಾಗುಗೆ ವಧು ಬೇಕಾಗಿದೆ" ಇದೇ ತಿಂಗಳಲ್ಲಿ ತೆರೆಗೆ

ಬಹುತೇಕ ಗಂಡು ಮಕ್ಕಳಿಗೆ ಮದುವೆಗೆ ಹೆಣ್ಣು ಸಿಗುತ್ತಿಲ್ಲ. ಇದು ಈಗ ದೊಡ್ಡ ಸಮಸ್ಯೆ. ಇದಕ್ಕೆ ಕಾರಣಗಳು ಹಲವಾರು. ಇಂತಹ ಪ್ರಸ್ತುತ ಪರಿಸ್ಥಿತಿಯನ್ನಿಟ್ಟುಕೊಂಡು ನಿರ್ದೇಶಕ ಆರ್ ಕೆ "ನಾಗುಗೆ ವಧು ಬೇಕಾಗಿದೆ" ಎನ್ನುವ ಸಿನಿಮಾ ಮಾಡಿದ್ದಾರೆ. ಆರ್ ಕೆ ಅವರದೇ ಕಥೆ, ಚಿತ್ರಕಥೆ ಸಂಭಾಷಣೆ ಹಾಗೂ ನಿರ್ದೇಶನ... ಅಕ್ಟೋಬರ್ ನಲ್ಲೇಚಿತ್ರ ತೆರೆಗೆ ಬರಲಿದೆ.

ನಗರ ಪ್ರದೇಶಗಳಲ್ಲಾಗಲಿ ಹಾಗೂ ಹಳ್ಳಿಗಳಲ್ಲಾಗಲಿ ಹುಡುಗರಿಗೆ ಮದುವೆ ಆಗುತ್ತಿಲ್ಲ. ಹುಡುಗನಿಗೆ ಸರ್ಕಾರಿ ಕೆಲಸಾನೆ ಬೇಕು. ಹೆಣ್ಣು ಕೊಡಬೇಕು ಅಂದರೆ ಅತ್ತೆ, ಮಾವ ಇರಬಾರದು. ಅದರಲ್ಲೂ ಅತ್ತೆ ಅಂತೂ ಇರಲೇ ಬಾರದು. ಬೆಂಗಳೂರಿನಲ್ಲೇ ಸೈಟ್ ಅಥವಾ ಮನೆ ಇರಬೇಕು. ಈಗಿನ ಕಾಲದ ಹೆಚ್ಚಿನ ಹುಡುಗಿಯರು ಈ ರೀತಿಯ ಬೇಡಿಕೆಗಳನ್ನಿಡುತ್ತಾರೆ. ಈ ಅಂಶಗಳನ್ನಿಟ್ಟುಕೊಂಡು ಹಾಗೂ ಹತ್ತಿರದಿಂದ ಕಂಡ ಕೆಲವು ಸನ್ನಿವೇಶಗಳಿಂದ ಪ್ರೇರಿತನಾಗಿ ಈ ಚಿತ್ರದ ಕಥೆ ಬರೆದಿದ್ದೇನೆ. ಇದೊಂದು ನೈಜಘಟನೆ ಆಧಾರಿತ ಚಿತ್ರ. ಬೆಂಗಳೂರು, ಮಂಡ್ಯ, ಮೈಸೂರು, ಚಾಮರಾಜನಗರ, ಮದ್ದೂರು, ರಾಮನಗರ ಮುಂತಾದ ಕಡೆ ಚಿತ್ರೀಕರಣ ನಡೆದಿದೆ.

"ವಸುದೈವ ಕುಟುಂಬಕಂ". ಧ್ರುವಸರ್ಜಾ ಹೊಸ ಚಿತ್ರ

ಧ್ರುವ ಸರ್ಜಾಗೆ ಹುಟ್ಟುಹಬ್ಬದ ಸಂಭ್ರಮ. ಧ್ರುವ ಸರ್ಜಾ ನಾಯಕನಾಗಿ ನಟಿಸುತ್ತಿರುವ ನೂತನ ಚಿತ್ರದ ಘೋಷಣೆಯಾಗಿದೆ. ಹರೀಶ್ ಪೆದ್ದಿ ನಿರ್ಮಿಸುತ್ತಿದ್ದು , ಬಿ.ಎಸ್ ಸುಧೀಂದ್ರ ಸಹ ನಿರ್ಮಾಪಕರಾಗಿದ್ದಾರೆ. ನಂದ ಸುಧೀರ್ ನಿರ್ದೇಶಿಸುತ್ತಿರುವ ಈ ಚಿತ್ರಕ್ಕೆ "ವಸುದೈವ ಕುಟುಂಬಕಂ" ಎಂದು ಹೆಸರಿಡಲಾಗಿದೆ.

ಸದ್ಯದಲ್ಲೇ ಚಿತ್ರೀಕರಣ ಆರಂಭವಾಗಲಿದೆ. ಈ ಚಿತ್ರದ ಮೂಲಕ ನಂದಕಿಶೋರ್ ಅವರು ನಂದ ಸುಧೀರ್ ಎಂದು ಹೆಸರು ಬದಲಿಸಿಕೊಂಡಿದ್ದಾರೆ.

"ವಸುದೈವ ಕುಟುಂಬಕಂ" ಕೌಟುಂಬಿಕ ಕಥಾಹಂದರ ಹೊಂದಿರುವ ಚಿತ್ರವಾಗಿದೆ. ಲವ್, ಆಕ್ಷನ್, ಸೆಂಟಿಮೆಂಟ್ ಸೇರಿದಂತೆ ಎಲ್ಲಾ ಅಂಶಗಳು ಈ ಚಿತ್ರದಲ್ಲಿರುತ್ತದೆ. ಧ್ರುವ ಸರ್ಜಾ ಅವರ ಅಭಿನಯದ ಚಿತ್ರದ ಹಾಡುಗಳು ಜನಪ್ರಿಯವಾಗಿದೆ. ಈ ಚಿತ್ರದಲ್ಲೂ ಸಹ ಸುಮಧುರ ಗೀತೆಗಳಿರುತ್ತದೆ. ವಿ.ಹರಿಕೃಷ್ಣ ಸಂಗೀತ ಸಂಯೋಜನೆ ಮಾಡಲಿದ್ದಾರೆ. ಸತ್ಯ ಹೆಗ್ಡೆ ಛಾಯಾಗ್ರಹಣ ಹಾಗೂ ದೀಪು ಎಸ್ ಕುಮಾರ್ ಸಂಕಲನವಿರುವ "ವಸುದೈವ ಕುಟುಂಬಕಂ" ಚಿತ್ರದಲ್ಲಿ ಹೆಸರಾಂತ ಹಾಗೂ ಅನುಭವಿ ಕಲಾವಿದರ ಬಹುದೊಡ್ಡ ತಾರಾಬಳಗವಿರುತ್ತದೆ. ಮುಂದಿನ ದಿನಗಳಲ್ಲಿ ಈ ಕುರಿತು ಹೆಚ್ಚಿನ ಮಾಹಿತಿ ಸಿಗಲಿದೆ.

'ರೋಲೆಕ್ಸ್' ಈಗ "ರಿಲಾಕ್ಸ್"

ಶೀರ್ಷಿಕೆ ಬದಲು!!. ಅಂಬಟಿ ಮಧು ಮೋಹನ್ ನಿರ್ಮಿಸಿರುವ, ಶ್ರೀನಿವಾಸ ಮಂಡ್ಯ ನಿರ್ದೇಶಿಸಿರುವ ಹಾಗೂ ಕೋಮಲ್ ಕುಮಾರ್ ನಾಯಕರಾಗಿ ನಟಿಸಿರುವ, ಸೋನಾಲ್ ಮೊಂತೆರೊ ನಾಯಕಿಯಾಗಿ ಹಾಗೂ ವಿನೋದ್ ಪ್ರಭಾಕರ್ ವಿಶೇಷಪಾತ್ರದಲ್ಲಿ ಅಭಿನಯಿಸಿರುವ ಚಿತ್ರ ಬಿಡುಗಡೆಗೆ ಸಿದ್ದವಾಗಿ, ಸದ್ಯದಲ್ಲೇ ತೆರೆಗೆ ಸಹ ಬರಲಿದೆ. ಈ ಸಂದರ್ಭದಲ್ಲಿ ಚಿತ್ರದ ಶೀರ್ಷಿಕೆ ಬದಲಾವಣೆ ಮಾಡಲಾಗಿದೆ.

"ರೋಲೆಕ್ಸ್" ಚಿತ್ರದ ಶೀರ್ಷಿಕೆಯನ್ನು "ರಿಲಾಕ್ಸ್" ಎಂದು ಚಿತ್ರತಂಡ ಬದಲಿಸಿದೆ.

ಹೆಸರಾಂತ ಸಂಸ್ಥೆಯೊಂದು "ರೋಲೆಕ್ಸ್" ಶೀರ್ಷಿಕೆಯನ್ನಾಗಲಿ ಅಥವಾ ಅದಕ್ಕೆ ಸಂಬಂಧಿಸಿದ ಸೌಂಡ್ ಆಗಲಿ ಬಳಸಕೊಳ್ಳಬಾರದೆಂದು ನೋಟಿಸ್ ನೀಡಿದೆ. ಆದರೆ ನೋಟಿಸ್ ನೀಡಿರುವ ಸಂಸ್ಥೆಗೆ ಸಂಬಂಧಿಸಿದ ಹಾಗೆ ನಮ್ಮ ಚಿತ್ರದಲ್ಲಿ ಯಾವುದನ್ನು ಬಳಸಿಕೊಂಡಿಲ್ಲ. ಈಗ ಚಿತ್ರ ಬಿಡುಗಡೆಯ ಹಂತದಲ್ಲಿದ್ದು, ಈ ಸಮಯದಲ್ಲಿ ಶೀರ್ಷಿಕೆಗಾಗಿ ಹೋರಾಡಲು ಸಮಯವಿಲ್ಲ. ಚಿತ್ರದ ಕಂಟೆಂಟ್ ಬಹಳ ಚೆನ್ನಾಗಿದೆ. ಕಂಟೆಂಟ್ ಎಲ್ಲರಿಗೂ ಮೆಚ್ಚುಗೆಯಾಗುವ ಭರವಸೆ ಇದೆ. ಹಾಗಾಗಿ ಚಿತ್ರದ ಶೀರ್ಷಿಕೆಗಿಂತ ಕಂಟೆಂಟ್ ಮುಖ್ಯ ಎಂದು ಚಿತ್ರತಂಡದ ತೀರ್ಮಾನವಾಗಿದ್ದು, "ರೋಲೆಕ್ಸ್" ಬದಲಿಗೆ "ರಿಲಾಕ್ಸ್" ಎಂದು ಬದಲಾವಣೆ ಮಾಡಲಾಗಿದೆ.

ಚಿತ್ರ "ರಿಲಾಕ್ಸ್" ಎಂಬ ಹೆಸರಿನಿಂದಲೇ ಬಿಡುಗಡೆಯಾಗಲಿದೆ ಎಂದು ನಿರ್ಮಾಪಕ ಅಂಬಟಿ ಮಧು ಮೋಹನ್ ಹಾಗೂ ನಿರ್ದೇಶಕ ಶ್ರೀನಿವಾಸ ಮಂಡ್ಯ ತಿಳಿಸಿದ್ದಾರೆ. ನಾಲ್ಕು ಹಾಡುಗಳಿರುವ ಈ ಚಿತ್ರಕ್ಕೆ ಜೆಸ್ಸಿ ಗಿಫ್ಟ್ ಸಂಗೀತ ಸಂಯೋಜಿಸಿದ್ದಾರೆ. ನಂದು(ಕೆ.ಜಿ.ಎಫ್) ಹಿನ್ನೆಲೆ ಸಂಗೀತ ನೀಡಿದ್ದಾರೆ. ರಾಕೇಶ್ ಸಿ ತಿಲಕ್ ಛಾಯಾಗ್ರಹಣ, ಅರವಿಂದ್ ರಾಜ್ ಅವರ ಸಂಕಲನವಿರುವ ಈ ಚಿತ್ರಕ್ಕೆ ರಾಜೇಶ್ ವರ್ಮ ಕ್ರಿಯೇಟಿವ್ ಹೆಡ್ ಆಗಿ ಹಾಗೂ ಮುರಳಿಕೃಷ್ಣ ಅವರು ಕಾರ್ಯಕಾರಿ ನಿರ್ಮಾಪಕರಾಗಿ ಕಾರ್ಯ ನಿರ್ವಹಿಸಿದ್ದಾರೆ.

ಫಾದರ್ ಚಿತ್ರ ಡಿಸೆ 4 ಕ್ಕೆ ತೆರೆಗೆ

ನಿರ್ಮಾಪಕ – ನಿರ್ದೇಶಕ ಆರ್ ಚಂದ್ರು ಯಮುನ ಚಂದ್ರು ನಿರ್ಮಾಣದ ಪ್ರಕಾಶ್ ರಾಜ್ ನಟಿಸಿರುವ "ಫಾದರ್" ಚಿತ್ರದ ಫಸ್ಟ್ ಲುಕ್ ಹಾಗೂ ಟೀಸರ್ ಅಭಿಮಾನಿಗಳಲ್ಲಿ ಸಾಕಷ್ಟು ಕುತೂಹಲ ಮೂಡಿಸಿದೆ.

ಈ ಚಿತ್ರಡಿಸೆಂಬರ್ 4 ರಂದು ಬಿಡುಗಡೆಯಾಗಲಿದೆ. ರಾಜಮೋಹನ್ ಚಿತ್ರ ನಿರ್ದೇಶಿಸಿದ್ದಾರೆ.

"ಫಾದರ್" ಅಪ್ಪ – ಮಗನ ಬಾಂಧವ್ಯದ ಚಿತ್ರವಾಗಿದ್ದು, ಪ್ರಕಾಶ್ ರಾಜ್ ಹಾಗೂ ಡಾರ್ಲಿಂಗ್ ಕೃಷ್ಣ ಅಪ್ಪ – ಮಗನ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಹೆಸರಾಂತ "ಮ್ಯಾಕೀಸ್" ಸಂಸ್ಥೆ ಈ ಚಿತ್ರದ ವಿತರಣೆಯ ಹಕ್ಕನ್ನು ಪಡೆದುಕೊಂಡಿದೆ. ಚಿತ್ರದ ಹಾಡುಗಳು ಹಾಗೂ ಟ್ರೇಲರ್ ಸಹ ಸದ್ಯದಲ್ಲೇ ಬಿಡುಗಡೆಯಾಗಲಿದೆ. ಕುಟುಂಬ, ಭಾವನೆಗಳು ಮತ್ತು ಸಂಬಂಧಗಳ ಸುತ್ತ ಸಾಗುವ ಕಥಾಹಂದರ ಹೊಂದಿರುವ ?ಫಾದರ್?, ಎಲ್ಲಾ ವರ್ಗದ ಪ್ರೇಕ್ಷಕರಿಗೂ ಕನೆಕ್ಟ್ ಆಗುವಂತಹ ಕಥಾಹಂದರ ಹೊಂದಿದೆ. ವಿಶೇಷವಾಗಿ ಫ್ಯಾಮಿಲಿ ಆಡಿಯನ್ಸ್‌ಗೆ ಇದೊಂದು ಕೇವಲ ಚಿತ್ರವಾಗದೆ, ಸಂಬಂಧಗಳೊಂದಿಗೆ ಪಯಣಿಸುವ ಭಾವನಾತ್ಮಕ ಅನುಭವವಾಗಲಿದೆ.

ಟೊರೊಂಟೊ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದಲ್ಲಿ "ಮಹಿಮಾ" ಚಿತ್ರ

ಕಿರಣ್ ಭಾರ್ತೂರ್, ವೀಣಾ ಭಾರ್ತೂರ್ ಹಾಗೂ ನವೀನ್ ಕುಮಾರ್ ಅವರು ನಿರ್ಮಿಸಿರುವ, ಗೋವಿಂದರಾಜು ಹಾಗೂ ಶಶಿಧರ್ ರೆಡ್ಡಿ ಸಹ ನಿರ್ಮಾಣದ ನವೀನ್ ಕುಮಾರ್ ನಿರ್ದೇಶನದ "ಮಹಿಮಾ" ಕನ್ನಡ ಚಿತ್ರ ಸೌತ್ ಏಷ್ಯಾದ ಎಲ್ಲಾ ಭಾಷೆಗಳ ಚಿತ್ರಗಳು ಪ್ರದರ್ಶನವಾಗುವ ಪ್ರತಿಷ್ಠಿತ ಟೊರಾಂಟೊ ಅಂತರರಾಷ್ಟ್ರೀಯ ಚಲನಚಿತ್ರೋತ್ಸವಕ್ಕೆ ಆಯ್ಕೆಯಾಗಿದೆ. ಅಕ್ಟೋಬರ್ 17 ರಂದು ಈ ಚಿತ್ರದ ಗ್ರಾ್ಯಂಡ್ ಪ್ರೀಮಿಯರ್ ಆಗಲಿದೆ. ಇದಕ್ಕೂ ಮುನ್ನ ಬೆಂಗಳೂರು ಅಂತರರಾಷ್ಟ್ರೀಯ ಚಲನಚಿತ್ರೋತ್ಸವ ಹಾಗೂ ಅಕ್ಕ ಸಮ್ಮೇಳನದಲ್ಲೂ "ಮಹಿಮಾ" ಚಿತ್ರ ಪ್ರದರ್ಶನಗೊಂಡಿತ್ತು.

ಈವರೆಗೂ ಸಾಕಷ್ಟು ಕಿರುಚಿತ್ರಗಳನ್ನು ನಿರ್ದೇಶಿಸಿರುವ ಹಾಗೂ ಉದ್ಯಮಿ ಕೆನಡಾ ನಿವಾಸಿ ನವೀನ್ ಕುಮಾರ್ ನಿರ್ದೇಶನದ ಮೊದಲ ಚಿತ್ರ "ಮಹಿಮಾ". ಈ ಚಿತ್ರದ ಕಥೆ, ಚಿತ್ರಕಥೆ ಅವರದೇ.

ಟೊರೊಂಟೊದಲ್ಲಿ ನೆಲೆಸಿರುವ ಮಹಿಮಾ, ಒಂದು ರಾತ್ರಿ ತನ್ನ ಅತ್ತೆಯ ಮಗಳು ಸಾನ್ವಿಯೊಂದಿಗೆ ತೆರಳುವಾಗ ಆಕಸ್ಮಿಕವಾಗಿ ಕೆನಡಾದ ಯುವತಿಯೊಬ್ಬಳಿಗೆ ಕಾರಿನಿಂದ ಡಿಕ್ಕಿ ಹೊಡೆದು, ಸ್ಥಳದಿಂದ ಪರಾರಿಯಾಗುತ್ತಾಳೆ. ಅಪರಾಧ ಪ್ರಜ್ಞೆಯಿಂದ ಬಳಲುವ ಮಹಿಮಾಳನ್ನು, ಮೃತಪಟ್ಟ ಯುವತಿಯ ಪ್ರತೀಕಾರದ ಆತ್ಮ ಕಾಡತೊಡಗುತ್ತದೆ. ಮಹಿಮಾಳ ಕುಟುಂಬದಲ್ಲಿ ಸರಣಿ ಸಾವುಗಳು ಸಂಭವಿಸಿದಾಗ, ಡಿಟೆಕ್ಟಿವ್ ಆರ್ಯ ತನಿಖೆ ಆರಂಭಿಸುತ್ತಾನೆ. ಕೊನೆಗೆ, ಆತ್ಮದ ಹಿಂದಿರುವ ನಿಗೂಢ ಸತ್ಯವೊಂದು ಅನಾವರಣಗೊಳ್ಳುತ್ತದೆ. ಇದೇ ಚಿತ್ರದ ಪ್ರಮುಖ ಕಥಾಸಾರಾಂಶವಾಗಿದೆ. ಇಡೀ ಚಿತ್ರದ ಚಿತ್ರೀಕರಣ ಕೆನಡಾದಲ್ಲೇ ನಡೆದಿರುವುದು ವಿಶೇಷ.

ಮೂಲತಃ ದಕ್ಷಿಣ ಕನ್ನಡದವರಾದ, ಕೆನಡಾದ ಹೆಸರಾಂತ ವ್ಲಾಗರ್ ಪ್ರಜ್ಞಾ ಜೈನ್ ಅವರು "ಮಹಿಮಾ" ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ರಘುರಾಮ್(ಮಾಲ್ಗುಡಿಡೇಸ್), ಬಿಯೆಟಾ ನಿಕೋಲ್ ಆಮ್ರೆ, ಕಾವ್ಯಶ್ರೀ, ಪಾಲ್ ಹಾಷ್ಕಿನ್ಸ್, ಮಂಜುಳಾ ರಾಣೆ ಮುಂತಾದವರು ತಾರಾಬಳಗದಲ್ಲಿದ್ದಾರೆ.

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,